4. ವರದಿಯನ್ನೊಪ್ಪಿಸುವುದು

ಶ್ರೀ ಬಸವರಾಜ ರಾಯರೆಡ್ಡಿ (ಅಧ್ಯಕ್ಷರು) (ಸಾರ್ವಜನಿಕ ಲೆಕ್ಕಪತ್ರ ಸಮಿತಿ): ಮಾನ್ಯ ಅಧ್ಯಕ್ಷರು, ನಗರಾಭಿವೃದ್ಧಿ ಇಲಾಖೆಗೆ ಸಂಬಂಧಿಸಿದಂತೆ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಕಾವೇರಿ ನೀರು ಸರಬರಾಜು ಯೋಜನೆಯ 4ನೇ ಹಂತ 1ನೇ ಘಟಕದ ಮೇಲಿನ ಸಾರ್ವಜನಿಕ ಲೆಕ್ಕಪತ್ರ ಸಮಿತಿಯ 4ನೇ ವರದಿಯನ್ನು ಸಮಿತಿಯ ಪರವಾಗಿ ಸಮಿತಿಯ ಅಧ್ಯಕ್ಷನಾದ ನಾನು ವಿಧಾನಸಭೆಯಲ್ಲಿ ಮಂಡಿಸುತ್ತೇನೆ.

ಅಧ್ಯಕ್ಷರು : ವರದಿಯನ್ನೊಪ್ಪಿಸಲಾಯಿತು. ಈಗ ಬಸವರಾಜುರವರೇ ಏನು ಹೇಳಿ. ಬೆಳಿಗ್ಗೆ ಸದನದ ಬಾವಿಗೇ ಬಂದುಬಿಟ್ಟಿದ್ದಿರಲ್ಲಾ.

5. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ವಿಷಯ : ರಾಜ್ಯದ ಹಲವಾರು ಭಾಗಗಳಲ್ಲಿ ಪ್ರವಾಹದಿಂದ ಉಂಟಾದ ಹಾನಿ ಬಗ್ಗೆ.

ಶ್ರೀ ಹೆಚ್.ಡಿ. ಬಸವರಾಜು (ವಿರಾಜಪೇಟೆ) : ಮಾನ್ಯ ಅಧ್ಯಕ್ಷರೆ, ಕಳೆದ ಮೂರ್ನಾಲ್ಕು ದಿವಸಗಳಿಂದ ಕೊಡಗು ಜಿಲ್ಲೆಯಲ್ಲಿ ಯಾವ ರೀತಿ ಮಳೆ ಬೀಳುತ್ತಿದೆಯೆಂದರೆ ಬಹುಶಃ ಕಲ್ಪನೆಗೂ ಊಹಿಸಿಕೊಳ್ಳಲಾರದಷ್ಟು ಕುಂಭಧಾರೆ ರೀತಿಯಲ್ಲಿ ಮಳೆ ಸುರಿಯುತ್ತಿದೆ. ಹೀಗೆ ಮಳೆ ಸುರಿಯುತ್ತಿರುವಂಥ ಸಂದರ್ಭದಲ್ಲಿ ಕೆಲವು ಅನಾಹುತಗಳು ಆಗಿದೆ. ಮಡಿಕೇರಿ ತಾಲ್ಲೂಕು ಮೇಕೇರಿ ಗ್ರಾಮದ ಬಳಿ ಇದ್ದಂಥ ಒಂದು ಗುಡ್ಡ ಕುಸಿದು ಆ ಭಾಗದಲ್ಲಿ ವಾಸ ಮಾಡತಕ್ಕಂಥ ಎರಡು ಮನೆಗಳ ಮೇಲೆ ಗುಡ್ಡ ಬಿದ್ದಿದೆ. ಆ ಎರಡು ಮನೆಗಳಲ್ಲಿದ್ದಂಥ ದುರ್ದೈವಿಗಳು ಯಾವ ರೀತಿ ನೋವನ್ನು ಅನುಭವಿಸುತ್ತಿದ್ದರು ಎನ್ನುವುದನ್ನು ವರ್ಣನೆ ಮಾಡುವುದಕ್ಕೆ ಆಗುತ್ತಿಲ್ಲವೆಂದು ಬಹಳ ನೋವಿನಿಂದ ಹೇಳಬೇಕಾದಂಥ ಒಂದು ಸಂಗತಿ ಇದಾಗಿದೆ. ಚಿರನಿದ್ರೆಯಲ್ಲಿದ್ದಂಥ ಸಂದರ್ಭದಲ್ಲಿ ನಿನ್ನೆ ರಾತ್ರಿ ಆ ಮಳೆಯಿಂದ ಗುಡ್ಡ ಕುಸಿದು ಅದು ಆ ಮನೆಯ ಮೇಲೆ ಬಿದ್ದು ಸುಮಾರು ಆರು ಜನರು ಮರಣ ಹೊಂದಿದ್ದಾರೆ. ಇವರ ಬಗ್ಗೆ ನಾನು ಪ್ರಸ್ತಾವನೆ ಮಾಡುವುದಕ್ಕೋಸ್ಕರ ಬಹುಶಃ ಬೆಳಿಗ್ಗೆ ಹಿರಿಯರು ಮಾತನಾಡತಕ್ಕಂಥ ಸಂದರ್ಭದಲ್ಲಿ ನಾನು ಮಧ್ಯ ಪ್ರವೇಶ ಮಾಡಿದೆ. ನನಗೆ ಅವಕಾಶ ಕೊಡಬೇಕು, ಪರಿಸ್ಥಿತಿ ಈ ರೀತಿ ಇದೆ. ಸಂತ್ರಸ್ಥರ ಕುಟುಂಬಕ್ಕೆ ಸರ್ಕಾರದ ವತಿಯಿಂದ ನಾವು ಏನು ಪರಿಹಾರವನ್ನು ಕೊಡಬೇಕಾಗಿದೆಯೋ ಅದರ ಬಗ್ಗೆ ಒಂದು ಘೋಷಣೆಯಾದರೆ ಕಡೇ ಪಕ್ಷ ಒಂದು ಕೊಂಚವಾದರೂ ಸಾಂತ್ವನ ಅವರಿಗೆ ಸಿಗುತ್ತದೆ. ಆ ಕುಟುಂಬದವರು ಯಾರು ಸತ್ತವರ ಮೇಲಿಯೇ ಅವಲಂಬಿತರಾಗಿದ್ದರೋ ಅವರಿಗೆ ಸರ್ಕಾರ ಸಾಂತ್ವನಕ್ಕೆ ಹೋದರೆ ಅವರಿಗೆ ಸರ್ಕಾರದವರು ನಮ್ಮ ಸಾಂತ್ವನಕ್ಕೆ ಬಂದಿದ್ದಾರೆ, ನಮಗೆ ಪರಿಹಾರವನ್ನು

ಕೊಡುವುದರ ಮೂಲಕ ನಮಗಾಗಿರುವಂಥ ನಷ್ಟಕ್ಕೆ ಸರ್ಕಾರವೂ ಕೂಡ ಪರಿಹಾರ ಕೊಟ್ಟು ಸಾಂತ್ವನ ಹೇಳುವುದರಲ್ಲಿ ಭಾಗಿಯಾಗಿದೆ ಎನ್ನುವಂಥ ಭಾವನೆ ಬರಲಿ ಎನ್ನುವಂಥ ಉದ್ದೇಶದಿಂದ ಆ ಒಂದು ವಿಚಾರವನ್ನು ಪ್ರಸ್ತಾವನೆ ಮಾಡುವುದಕ್ಕೆ ಬೆಳಿಗ್ಗೆ ನಾನು ಪ್ರಯತ್ನ ಮಾಡಿದೆ. ಇದರ ಜೊತೆಗೆ ಈ ಕುಟುಂಬಗಳಿಗೆ ಆಗಿರುವಂಥ ನಷ್ಟದ ಬಗ್ಗೆ ನಾನು ತಮ್ಮ ಮೂಲಕ ಸರ್ಕಾರಕ್ಕೆ ಹೇಳುತ್ತಿದ್ದೇನೆ, ಒಟ್ಟು ಆರು ಮಂದಿ ಸಾವನ್ನಪ್ಪಿದ್ದಾರೆ. ಆ ಆರು ಮಂದಿ ಸಾವನ್ನಪ್ಪಿರುವಂಥ ಆ ಕುಟುಂಬಕ್ಕೆ ಸರ್ಕಾರದ ವತಿಯಿಂದ ತ್ತ್ಕ್ಷಣ ಪರಿಹಾರದ ಹಣವನ್ನು ಘೋಷಣೆ ಮಾಡಬೇಕಾಗಿದೆ. ಇನ್ನು ಎರಡನೆಯದಾಗಿ ಆ ಭಾಗದಲ್ಲಿ ಸತತ ಮಳೆಯಿಂದಾಗಿ ಎಲ್ಲಾ ರಸ್ತೆಗಳು ಜಲಾವೃತ್ತವಾಗಿವೆ. ಅಲ್ಲಿ ಸಮರೋಪಾದಿಯಲ್ಲಿ ಕೆಲಸ ಕಾರ್ಯಗಳನ್ನು ಮಾಡುವಂಥದ್ದನ್ನು ಮಾಡಬೇಕೆಂದು ಅಧಿಕಾರಿಗಳಿಗೆ ಸರ್ಕಾರ ಸೂಚನೆ ಕೊಡಬೇಕಾಗಿದೆ. ಈಗಾಗಲೇ ನಾನು ಪತ್ರಿಕೆಯಲ್ಲಿ ಓದಿದ್ದೇನೆ, ಉಸ್ತುವಾರಿ ಸಚಿವರಾದ ಮಾನ್ಯ ರಾಮಚಂದ್ರಗೌಡರು ಈಗಾಗಲೇ ಜಿಲ್ಲೆಗೆ ತೆರಳಿದ್ದಾರೆ ಮತ್ತು ಪರಿಹಾರ ಕಾರ್ಯ ಸರಿಯಾದ ರೀತಿಯಲ್ಲಿ ಮಾಡಿಸುವುದಕ್ಕೆ ಹೋಗಿದ್ದಾರೆ ಎನ್ನುವ ವಿಷಯ ನನ್ನ ಗಮನಕ್ಕೆ ಬಂದಿದೆ. ಆದರೂ ಕೂಡ ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತಿದ್ದೇನೆ, ಪರಿಹಾರವನ್ನು ಘೋಷಣೆ ಮಾಡಬೇಕು ಮತ್ತು ಪರಿಹಾರ ಕಾರ್ಯಗಳು ಸಮರೋಪಾದಿಯಲ್ಲಿ ಮಾಡುವಂತೆ ಅಧಿಕಾರಿಗಳಿಗೆ ಸೂಚನೆ ಕೊಡಬೇಕು. ಏಕೆಂದರೆ ಈ ಮಳೆಯಿಂದಾಗಿ ಸಾರ್ವಜನಿಕರಿಗೆ ಬಹಳಷ್ಟು ಹಾನಿಯಾಗಿದೆ. ಸಾರ್ವಜನಿಕ ಆಸ್ತಿಪಾಸ್ತಿಗಳಿಗೆ ಅಪಾರವಾದ ಹಾನಿಯಾಗಿದೆ. ಸರ್ಕಾರ ಪರಿಹಾರ ಏನು ಘೋಷಣೆ ಮಾಡುತ್ತದೆ ಎಂಬುದನ್ನು ಹೇಳಬೇಕು. ಸಂತ್ರಸ್ಥ ಕುಟುಂಬವರ್ಗದವರಿಗೆ ಪರಿಹಾರ ಒದಗಿಸುತ್ತೇವೆ ಎನ್ನುತಕ್ಕಂಥ ಘೋಷಣೆಯಾಗಬೇಕು. ಇನ್ನು ನಾನು ಇದನ್ನು ಹೇಳಲೇಬೇಕಾಗುತ್ತದೆ, 28ನೇ ತಾರೀಖು ಇದೇ ಒಂದು ಸದನದಲ್ಲಿ ಮಳೆ ಹಾನಿಯಿಂದ ಆದಂಥ ಅನಾಹುತದ ಬಗ್ಗೆ ನಾನು ಸರ್ಕಾರದ ಗಮನವನ್ನು ಸೆಳೆದಿದ್ದೆ. ಮಧ್ಯೆವ, ಸರ್ಕಾರ ಅವೊತ್ತೇ ಏನಾದರೂ ಸಮರೋಪಾದಿಯಲ್ಲಿ ಕೆಲಸ ಕಾರ್ಯಗಳನ್ನು ಪ್ರಾರಂಭ ಮಾಡಿದ್ದರೆ ಈ ಒಂದು ಘಟನೆ ಸಂಭವಿಸುತ್ತಿರಲಿಲ್ಲ. ಆದುದರಿಂದ ನಾನು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ, ಪರಿಹಾರದ ಹಣವನ್ನು ಘೋಷಣೆ ಮಾಡಬೇಕು. ಪರಿಹಾರ ಕಾರ್ಯಗಳನ್ನು ಸಮರೋಪಾದಿಯಲ್ಲಿ ಕೊಡಗು ಜಿಲ್ಲೆಯಾದ್ಯಂತ ಸರ್ಕಾರ ಕೈಗೊಳ್ಳಬೇಕು ಮತ್ತು ಹೆಚ್ಚಿನ ಪರಿಹಾರವನ್ನು ಕೊಡಗು ಜಿಲ್ಲೆಗೆ ಕೊಡಬೇಕು. ಏಕೆಂದರೆ ಸಾರ್ವಜನಿಕ ಆಸ್ತಿಪಾಸ್ತಿಗಳಿಗೆ ಬಹಳಷ್ಟು ನಷ್ಟ ಉಂಟಾಗಿದೆ. ಕೃಷಿಕರಿಗೆ ನಷ್ಟವಾಗಿದೆ. ಅರಣ್ಯ ಪ್ರದೇಶಗಳಲ್ಲಿ ವಾಸ ಮಾಡುವಂಥ ಗಿರಿಜನರ ಬದುಕು ಯಾವ ರೀತಿ ಇದೆಯೆಂದು ಊಹಿಸಿಕೊಳ್ಳುವುದಕ್ಕೂ

ಸಾಧ್ಯವಾಗದಷ್ಟು ದುಸ್ತರವಾಗಿದೆ. ಆ ರೀತಿಯ ಕಷ್ಟಕರವಾದಂಥ ಬದುಕನ್ನು ಈ ಮಳೆಗಾಲದಲ್ಲಿ ಅವರು ಅನುಭವಿಸುತ್ತಿದ್ದಾರೆ. ಅವರಿಗೂ ಕೂಡ ಪರ್ಯಾಯವಾಗಿ ಸರ್ಕಾರ ಏನು ಮಾಡುತ್ತದೆ ಎನ್ನುವುದನ್ನು ಹೇಳಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಹೆಚ್.ಎಂ. ವಿಶ್ವನಾಥ್ (ಸಕಲೇಶಪುರ) : ಮಾನ್ಯ ಅಧ್ಯಕ್ಷರೆ, ಸಕಲೇಶಪುರದಲ್ಲೂ ಕೂಡ ಒಂದು ವಾರದಿಂದ ಬಾರಿ ಮಳೆ ಬೀಳುತ್ತಿದೆ. ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ ಬರತಕ್ಕಂಥ ಸುಮಾರು 9 ಗ್ರಾಮ ಪಂಚಾಯತಿಗಳಲ್ಲಿ ಜನರು ಹೊರಗಡೆ ಬರುವ ಪರಿಸ್ಥಿತಿ ಇಲ್ಲ. ಸುಮಾರು 800 ವಿದ್ಯುಚ್ಛಕ್ತಿ ಕಂಬಗಳು ಬಿದ್ದಿದೆಯೆಂದು ಈಗಾಗಲೇ ವರದಿ ಬಂದಿದೆ. ಒಂದು ವಾರದಿಂದ ಯಾವುದೇ ಊರುಗಳಲ್ಲಿ ವಿದ್ಯುಚ್ಛಕ್ತಿ ಇಲ್ಲ. ಸಕಲೇಶಪುರದಂಥ ನಗರಕ್ಕೆ ಇವೊತ್ತು ನೀರು ಸರಬರಾಜು ಆಗಬೇಕಾಗಿರುವುದು ವಿದ್ಯುಚ್ಛಕ್ತಿ ಇಲ್ಲದಿರುವುದರಿಂದ ನಿಂತುಹೋಗಿದೆ. ಮಳೆ ನೀರನ್ನೇ ತೋಡಿಕೊಂಡು ಕುಡಿಯುವಂಥ ಸ್ಥಿತಿ ಬಂದಿದೆ. ಹಳ್ಳಿಗಳಲ್ಲಿರತಕ್ಕಂಥ ಸುಮಾರು 125 ಜನತಾ ಮನೆಗಳು ಈಗಾಗಲೇ ಬಿದ್ದುಹೋಗಿವೆ. 50 ಪಶುವೈದ್ಯ ಶಾಲೆ, ಶಾಲಾ ಕಟ್ಟಡಗಳು ಮತ್ತು ಅತ್ತಿಹಳ್ಳಿ ಎನ್ನತಕ್ಕಂಥ ಗ್ರಾಮದೊಳಗೆ ಎರಡು ಪಿ.ಹೆಚ್.ಸಿ. ಸೆಂಟರ್‌ಗಳು ಬಿದ್ದುಹೋಗಿವೆ. ಜೊತೆಗೆ ನಮ್ಮ ಎಲ್ಲಾ ಪ್ರಮುಖವಾದಂತಹ ರಸ್ತೆಗಳು ಕೂಡ ಹಾಳಾಗಿ ಸಂಚಾರ ಅಸ್ತವ್ಯಸ್ತವಾಗಿದೆ. ಮರಗಳು ಬಿದ್ದು ಹೋಗಿವೆ. ಇದುವರೆಗೆ ಬಂದಿರುವ ವರದಿ ಪ್ರಕಾರ 150 ರಿಂದ 200 ಮರಗಳು ರಸ್ತೆಯಲ್ಲಿ ಬಿದ್ದಿವೆ. ಅದರ ಜೊತೆಗೆ ಸಣ್ಣಪುಟ್ಟ ಸೇತುವೆಗಳು ಮುರಿದುಕೊಂಡು ಹೋಗಿವೆ. ಅಲ್ಲದೇ ನಾವು ಸಂಚಾರ ಮಾಡುವಂತಹ ನ್ಯಾಷನಲ್ ಹೈವೇ ಇದೆ ಅಲ್ಲೂ ಕೂಡ ಕುಸಿದಿದೆ ಹಾಗೂ ಹೈವೇ ಬಂದ್ ಆಗುತ್ತಿದೆ ಎನ್ನುವಂತಹ ವರದಿ ಕೂಡ ಬರುತ್ತಿದೆ. ಅಲ್ಲಿ ಸತತವಾಗಿ ಮಳೆ ಬೀಳುತ್ತಿರುವುದರಿಂದ 1,500 ರಿಂದ 2,000 ಎಕರೆ ಏನು ಆಲೂಗಡ್ಡೆ ಬಿತ್ತನೆ ಮಾಡಿದ್ದರು ಆಲೂರು ತಾಲ್ಲೂಕಿನಲ್ಲಿ ಅದು ಸಂಪೂರ್ಣ ಕೊಳೆತು ಹೋಗಿದೆ. ಅಲ್ಲಿ ಸಂಪೂರ್ಣವಾಗಿ ಕೃಷಿ ಚಟುವಟಿಕೆ ನಿಂತುಹೋಗಿದೆ. ಇಂತಹ ಸಂದರ್ಭದಲ್ಲಿ ಸರ್ಕಾರ ಆ ಕಡೆ ನೋಡಬೇಕಾಗಿದೆ. ಅಲ್ಲಿ ಪರಿಹಾರವನ್ನು ಬಹಳ ದೊಡ್ಡ ಪ್ರಮಾಣದಲ್ಲಿ ಮಾಡಬೇಕಾಗಿದೆ. ವಿದ್ಯುಚ್ಛಕ್ತಿ ಕಂಬಗಳು ಏನು ಬಿದ್ದಿವೆ ಅವುಗಳನ್ನು ಎತ್ತಿ ನಿಲ್ಲಿಸುವುದಕ್ಕೆ ಕನಿಷ್ಠ ಒಂದು ತಿಂಗಳು ಬೇಕಾಗುತ್ತದೆ. ಅಲ್ಲಿಗೆ ಬೇಕಾದಂತಹ ಕಾರ್ಯಕ್ಕೆ ವಿಶೇಷವಾದ ಒಂದು ತಂಡವನ್ನು ರಚನೆ ಮಾಡಿ. ಅಲ್ಲಿಗೆ ನಾಲ್ಕು ವ್ಯಾನುಗಳು, ನಾಲ್ಕು ಲಾರಿಗಳು ಹಾಗೂ ನಾಲ್ಕು ಜೀಪುಗಳನ್ನು ವಿದ್ಯುಚ್ಛಕ್ತಿ ಮಂಡಳಿಗೆ ನೀವು ಕೊಡಬೇಕಾದಂತಹ ಪರಿಸ್ಥಿತಿ ಇದೆ. ಇದರ ಜೊತೆಗೆ ಇನ್ನೊಂದು ಸಮಸ್ಯೆ ಸೃಷ್ಟಿಯಾಗಿದೆ, ಯಾವಾಗ ಮಳೆಯ ಪ್ರವಾಹ

ಜಾಸ್ತಿ ಬರುತ್ತಿದೆ, ಆ ಭಾಗದಲ್ಲಿ ಇರುವಂತಹ ಕಾಡಾನೆಗಳು ಊರಿನೊಳಗೆ ಬಂದಿವೆ. ಮೊದಲೇ ಕಾಡಾನೆಗಳ ಹಾವಳಿ ನಮ್ಮ ಭಾಗದಲ್ಲಿ ಇದೆ. ಮೊನ್ನೆ ಒಂದು ತಿಂಗಳೊಳಗೆ ಇಬ್ಬರು ಮಹಿಳೆಯರನ್ನು ಸಾಯಿಸಿದೆ. ಸಕಲೇಶಪುರದ ಆಲೂರು ಭಾಗಕ್ಕೆ ಈಗಾಗಲೇ 22 ಆನೆಗಳು ಬಂದು ಕುಳಿತುಕೊಂಡಿವೆ. ಅವು ಕಾಡನ್ನು ಬಿಟ್ಟುಬಿಟ್ಟು ಊರಿನೊಳಗಡೆ ಬರುತ್ತಿವೆ. ಹೀಗಾಗಿ ಜನ ಸಂಚಾರ ಅಸ್ತವ್ಯಸ್ತವಾಗಿದೆ. ವಿದ್ಯುಚ್ಛಕ್ತಿ ಇಲ್ಲ, ಜನರು ಹೊರಗಡೆ ಓಡಾಡುವುದಕ್ಕೂ ಕೂಡ ಹೆದರಿಕೆಯಾಗುವಂತಹ ಸ್ಥಿತಿ ಇದ್ದು ಕಾರಣವೇನೆಂದರೆ ಕಾಡಾನೆಗಳು ಊರಿನೊಳಗೆ ಬಂದು ಕುಳಿತುಕೊಂಡಿವೆ. ಇಂತಹ ಪರಿಸ್ಥಿತಿಯಲ್ಲಿ ಸರ್ಕಾರ ಹೆಚ್ಚಿನ ಆದ್ಯತೆಯನ್ನು ನಮ್ಮ ಮಲೆನಾಡು ಭಾಗಕ್ಕೆ ಕೊಡಬೇಕಾಗುತ್ತದೆ. ನಮ್ಮ ಶಾಸಕರು ಹೇಳುತ್ತಿದ್ದಾರೆ, ಅರಕಲಗೂಡು ಇದು ನಮ್ಮ ಮಲೆನಾಡು ಸೆರಗಿನಲ್ಲಿ ಬರತಕ್ಕಂಥ ಭಾಗ ಏನಿದೆ, ಆ ಭಾಗದಲ್ಲಿ ಕೂಡ ಇದೇ ಸಮಸ್ಯೆ ಸೃಷ್ಟಿಯಾಗಿದೆ. ಆದುದರಿಂದ ಮಾನ್ಯ ಅಧ್ಯಕ್ಷರೆ, ನಿಮ್ಮ ಮುಖಾಂತರ ಸರ್ಕಾರಕ್ಕೆ ಗಮನಕ್ಕೆ ತರುವುದೇನೆಂದರೆ ತಕ್ಷಣ ನಮಗೆ ಪರಿಹಾರವನ್ನು ಮಾಡಬೇಕು. ಈಗ ಎರಡು ಅಥವಾ ಮೂರು ತಾಲ್ಲೂಕಿನ ತಹಸೀಲ್ದಾರ್ ಕೊಟ್ಟಿರುವಂತಹ ರಿಪೋರ್ಟ್ ಪ್ರಕಾರ ಹತ್ತು ಕೋಟಿ ರೂಪಾಯಿಗೂ ಹೆಚ್ಚು ಹಣ ನಷ್ಟವಾಗಿದೆ. ಅದು ಬೆಳೆ ಹಾನಿ ಹಾಗೂ ಇತರೆಯಿಂದ ಹತ್ತು ಕೋಟಿ ರೂಗೂ ಹೆಚ್ಚು ನಷ್ಟವಾಗಿದೆ. ದಯಮಾಡಿ ಸರ್ಕಾರ ಈ ಕೂಡಲೇ ಒಂದು ರೀತಿ ಯುದ್ಧೋಪಾದಿಯಲ್ಲಿ ಪರಿಹಾರವನ್ನು ಅಲ್ಲಿಗೆ ಕೊಡಬೇಕಾಗುತ್ತದೆ. ಹೆಚ್ಚು ಪರಿಹಾರವನ್ನು ಕೊಡವುದಕ್ಕೋಸ್ಕರ ಹಣವನ್ನು ಈಗಲೇ ನೀವು ಜಿಲ್ಲಾಧಿಕಾರಿಗಳ ಮುಖಾಂತರ ಬಿಡುಗಡೆ ಮಾಡಿಕೊಡಬೇಕಾಗುತ್ತದೆಂದು ಸರ್ಕಾರಕ್ಕೆ ನಾನು ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಜೀವಿಜಯ ರವರೆ, ನೀವೂ ಕೂಡ ಪ್ರವಾಹದ ಬಗ್ಗೆ ಮಾತನಾಡುತ್ತೀರಾ?

ಶ್ರೀ ಬಿ.ಎ. ಜೀವಿಜಯ (ಕುಶಾಲನಗರ) : ನಾನು ಹೆಚ್ಚಿಗೆ ಮಾತನಾಡುವುದಿಲ್ಲ, ನಾನು ಎಲ್ಲಿ ಮಾತನಾಡಿದ್ದೇನೆ? ಎಲ್ಲೋ ಒಂದು ವಿಷಯ ಮಾತನಾಡುತ್ತೇನೆ. ಅದೇ ವಿಷಯವನ್ನು ಮಾತನಾಡುತ್ತೇನೆ. ಮಾನ್ಯ ಬಸವರಾಜು ಹಾಗೂ ಮಾನ್ಯ ವಿಶ್ವನಾಥರವರು ಏನು ವಿಷಯ ಮಾತನಾಡಿದರು ಅದೇ ವಿಷಯವನ್ನು ಮಾತನಾಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಗ್ರಹಾಚಾರ ಏನೆಂದರೆ ಬೆಂಗಳೂರಿನಲ್ಲಿ ಎರಡು ಇಂಚು ಮಳೆ ಬಿದ್ದರೆ ಅಥವಾ ಮೂರು ಇಂಚು ಮಳೆ ಬಿದ್ದರೆ ಅದು ಎಲ್ಲಾ ಟಿ.ವಿ. ಚಾನೆಲ್‌ನಲ್ಲಿ ಬಹಳ ದೊಡ್ಡವಾಗಿ ಮಳೆ ಬಂದು ನಾಶವಾಗಿ ಹೋಗಿದೆ ಎಂದು ಹೇಳುತ್ತಾರೆ. ಅದರ ಬಗ್ಗೆ ಪತ್ರಿಕೆಯವರು ಬರೆಯುತ್ತಾರೆ. ಮಾನ್ಯ ಬಸವರಾಜು ಅವರು ಮಳೆ ಮೂರು ದಿವಸದಿಂದ ಬೀಳುತ್ತಿದೆ ಎಂದು ಹೇಳಿದರು. ಮೂರು ದಿವಸ ಅಲ್ಲ, ಎಂಟು ದಿವಸದಿಂದ ಸತತವಾಗಿ ಕೊಡಗಿನಲ್ಲಿ

ಏನು ಮಳೆ ಬರುತ್ತಿದೆ ಅದರಲ್ಲೂ ನನ್ನ ಕ್ಷೇತ್ರದಲ್ಲಿ ನಾನು ಇರುವಂತಹ ಗ್ರಾಮದಲ್ಲಿ ಮೂರು ದಿವಸದಲ್ಲಿ 26 ಇಂಚು ಮಳೆ ಬಿದ್ದಿದೆ. ಕಳೆದ ವರ್ಷ ಬೆಟ್ಟ ಬಿರುಕು ಬಿಟ್ಟು ಬಿದ್ದು ಹೋಗಿದ್ದನ್ನು ಪತ್ರಿಕೆಯಲ್ಲಿ ಓದಿದ್ದೀರಿ. ಎಲ್ಲರನ್ನೂ ಜಿಲ್ಲಾಧಿಕಾರಿಗಳು ಊರನ್ನು ಬಿಡಿಸಿದ್ದರು. ಈ ದಿವಸ ಅಲ್ಲಿ ಯಾರೂ ವಾಸ ಇಲ್ಲ. ಆಗ ಸರ್ಕಾರದಿಂದ ಪರಿಹಾರ ಕೊಡುತ್ತೇವೆಂದು ಹೇಳಿದರು. ಇದುವರೆಗೆ ಒಂದು ಪೈಸೆ ಪರಿಹಾರ ಕೊಡಲಿಲ್ಲ. ನಿನ್ನೆ ಸೋಮವಾರ ಪೇಟೆ ಕೆಲವು ಭಾಗಗಳಲ್ಲಿ ಶಾಂತ ಹಳ್ಳಿ ಎನ್ನುವ ಕಡೆ 22 ಇಂಚು ಮಳೆ ಬಿದ್ದಿದೆ, ಪುಷ್ಪಗಿರಿ ತಪ್ಪಲು ಇರವಂತಹ ಗ್ರಾಮದಲ್ಲಿ ಹೆಗಡೆ ಮನೆಯಲ್ಲಿ 28 ಇಂಚು ಮಳೆ ಬಿದ್ದಿದೆ. ನಿಮಗೆ ಕೆ.ಆರ್.ಎಸ್ ತುಂಬಬೇಕು, ನಿಮಗೆ ಕಬಿನಿ ತುಂಬಬೇಕು; ನಿಮಗೆ ಹೇಮಾವತಿ ತುಂಬಬೇಕು, ಎಲ್ಲಾ ಅಣೆಕಟ್ಟುಗಳು ಕೂಡ ತುಂಬಬೇಕು. ಆದರೆ ಕೊಡಗಿನ ನಮ್ಮ ಮಲೆನಾಡಿನಲ್ಲಿ ಮಳೆ ಬಿದ್ದರೆ ನಿರ್ಲಕ್ಷ ಭಾವದಿಂದ ಯಾವ ಸರ್ಕಾರ ಬಂದರೂ ಕೂಡ ಕಾಣುತ್ತಿದ್ದೀರಿ. ನಮ್ಮ ರಕ್ಷಣೆಗೆ ಬರುವುದಿಲ್ಲ. ಈ ರೀತಿ ಕುಂಭಿದ್ರೋಣ ಮಳೆಯಿಂದ ಅನೇಕ ಮನೆ ಕುಸಿದು ಹೋಗಿದೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಏಳು ಜನ ಮೇಕೇರಿ ಗ್ರಾಮದಲ್ಲಿ ಭೂಕುಸಿತದಿಂದ ಸತ್ತು ಹೋಗಿದ್ದಾರೆ. ಅದೇ ರೀತಿ ಸೋಮವಾರ ಪೇಟೆ ತಾಲ್ಲೂಕಿನಲ್ಲಿ ಸಾವಿರಾರು ಮನೆ ಬಿದ್ದು ಹೋಗಿದೆ. ಭಯಂಕರವಾಗಿ ಪ್ರಂಚಂಡವಾಗಿ ಬಿರುಗಾಳಿ ಬೀಸುತ್ತಿದೆ. ಸಾವಿರಾರು ಮರಗಳು ಉರುಳಿ ಬಿದ್ದು ಹೋಗಿದೆ. ಇಂತಹ ಪರಿಸ್ಥಿತಿಯಲ್ಲಿ ಅಧಿಕಾರಿಗಳು ಯಾರೂ ಹೋಗಿ ಸಮೀಕ್ಷೆಯನ್ನು ಮಾಡುವುದಿಲ್ಲ. ನಮಗೆ ವಿದ್ಯುಚ್ಛಕ್ತಿಯನ್ನು ವಾಪಸ್ಸು ಬರಬೇಕೆಂದರೆ ಇನ್ನು 15 ದಿವಸ ಬೇಕಾಗುತ್ತದೆ. ಸನ್ಮಾನ್ಯ ಮಂತ್ರಿಗಳಾದ ರೇವಣ್ಣನವರು ಇಲ್ಲಿ ಇದ್ದಾರೆ. ಎಲೆಕ್ಟ್ರಿಸಿಟಿ ಪೋಲ್ಸ್ ಇಲ್ಲವೆಂದು ಹೇಳುತ್ತಾರೆ. ಹಾಗೂ ಯಾವರೀತಿ ಸರಿ ಮಾಡುವುದೆಂದು ಹೇಳುತ್ತಾರೆ. ಆದುದರಿಂದ ಅಲ್ಲಿ ಏನು ಭೀಕರವಾಗಿ ಮಳೆ ಬೀಳುತ್ತಿದೆ ಕೊಡಗಿಗೆ ಪರಿಹಾರದ ರೂಪದಲ್ಲಿ ಹೆಚ್ಚಿನ ಹಣವನ್ನು ಒದಗಿಸಿಕೊಡಬೇಕು ನೀವೆಲ್ಲಾ ಸಪೋರ್ಟ್ ಮಾಡಬೇಕು. ನಿಮ್ಮ ಮಂಡ್ಯ ಜಿಲ್ಲೆಯವರು ಬಹಳ ಸಂತೋಷ ಪಡುತ್ತೀರಿ. ನಿಮಗೆ ಜಯಲಲಿತಾ ರವರ ಕಾಟ ತಪ್ಪಿತು.

ಶ್ರೀ ಎನ್. ಚಲುವರಾಯಸ್ವಾಮಿ : ನಾವು ನಿಮ್ಮ ಪರ ಇದ್ದೇವೆ.

ಶ್ರೀ ಬಿ.ಎ. ಜೀವಿಜಯ : ಪರ ಅಲ್ಲ, ಏನು ಪರ ಇದ್ದೀರಿ?

ಶ್ರೀ ಹೆಚ್.ಡಿ. ಬಸವರಾಜ್ : ಬರಿ ಮಂಡ್ಯದವರೇ ಅಲ್ಲ, ಇಡೀ ಬೆಂಗಳೂರು ನಗರದವರು ನಮ್ಮ ಈ ನೋವಿಗೆ ಸ್ಪಂದನ ಕೊಡಬೇಕಾಗಿದೆ. ಕುಡಿಯುವಂತಹ ನೀರನ್ನು ವ್ಯವಸ್ಥೆ ಮಾಡುವಂತಹವನು ನಾವು. ಅಲ್ಲಿ ಮಳೆ ಬಂದು ನಾವು ಕಂಗಾಲಾದರೆ ಇಲ್ಲಿನ ಜನತೆ ತುಂಬಾ ಸಂತೋಷ ಪಡುತ್ತದೆ. ಕಾವೇರಿ ತುಂಬಿ ಹರಿಯಿತು ಎಂದರೆ ಬರೀ

ಕರ್ನಾಟಕ ಮಾತ್ರ ಅಲ್ಲ ಮಂಡ್ಯ ಮಾತ್ರ ಅಲ್ಲ, ತಮಿಳುನಾಡು ಕೂಡ ಸಂತೋಷ ಪಡುತ್ತದೆ. ಆದರೆ ನಮ್ಮ ನೋವನ್ನು ಯಾರೂ ಸರಿಯಾಗಿ ಅರ್ಥ ಮಾಡಿಕೊಳ್ಳುವವರು ಇಲ್ಲ. ಅದೇ ನಮಗೆ ಬಂದಿರುವಂತಹ ನೋವಾಗಿದೆ. ಇವತ್ತು ನಮ್ಮ ನೋವಿಗೆ ಸ್ಪಂದನ ನಿಮ್ಮಿಂದ ಮತ್ತು ಎಲ್ಲರಿಂದಲೂ ಬೇಕಾಗಿದೆ.

ಶ್ರೀ ಬಿ.ಎ. ಜೀವಿಜಯ : ಈ ದಿವಸ ನಮ್ಮ ಗ್ರಾಮಾಂತರ ಪ್ರದೇಶದಲ್ಲಿ ರಸ್ತೆಗಳೆಲ್ಲಾ ತುಂಬಾ ಹಾಳಾಗಿ ಹೋಗಿದೆ. ನಮ್ಮ ಲೋಕೋಪಯೋಗಿ ಇಲಾಖೆಯ ಮಂತ್ರಿಗಳು ತಾರತಮ್ಯವನ್ನು ತೋರಿಸುವುದಿಲ್ಲ. ಅವರು ತುಂಬಾ ಸಹಾಯ ಮಾಡುತ್ತಿದ್ದಾರೆ. ಬೆಸ್‌ಕಾಂ ಏನಿದೆ ನಮಗೆ ಕೂಡಲೇ ಪೋರ್ಸ್ ಮತ್ತು ಮೆಟಿರಿಯಲ್ ಸಪ್ಲೈ ಮಾಡಬೇಕಾಗುತ್ತದೆ. ನಾಲ್ಕು ದಿವಸದಿಂದ ಸೋಮವಾರ ಪೇಟೆಯಲ್ಲಿ ಎಲೆಕ್ಟ್ರಿಸಿಟಿ ಇಲ್ಲ. ರೂರಲ್ ಡೆವಲಪ್‌ಮೆಂಟ್ ಮುಖಾಂತರ ಬರತಕ್ಕಂಥ ಹಣ ನಮಗೆ ಬಹಳ ಕಡಿಮೆ. ನಮ್ಮಲ್ಲಿ ರಸ್ತೆಗಳು ತುಂಬಾ ಹಾಳಾಗಿ ಹೋಗಿದೆ. ಅದಕ್ಕೋಸ್ಕರ ಹೆಚ್ಚಿನ ಅನುದಾನವನ್ನು ಕೊಡಬೇಕು. ಕಳೆದ ವರ್ಷ ಮಳೆ ಬಂದು ಸ್ಥಳಾಂತರ ಮಾಡತಕ್ಕಂಥ ಕೆಲಸವನ್ನು ಜಿಲ್ಲಾಧಿಕಾರಿಗಳು ಮತ್ತು ರೆವಿನ್ಯೂ ಅಧಿಕಾರಿಗಳು ಮಾಡಿದರು ಅವರಿಗೆ ಇದುವರೆಗೆ ಪರಿಹಾರವನ್ನು ಕೊಟ್ಟಿಲ್ಲ. ಸನ್ಮಾನ್ಯ ಎಂ.ಪಿ. ಪ್ರಕಾಶ್ ರವರು ಹಿಂದಿನ ಉಪ ಮುಖ್ಯಮಂತ್ರಿಗಳಾಗಿದ್ದರು, ಅವರಿಗೂ ವಿಷಯ ಗೊತ್ತಿದೆ. ಆದರೂ ಅವರು ಇಂಟರ್‌ವೀನ್ ಆದರೂ ಕೂಡ ಇದುವರೆಗೆ ಹಣ ಸಹಾಯವನ್ನು ಮಾಡಲಿಲ್ಲ. ಆದುದರಿಂದ ಈ ರೀತಿ ನಿರ್ಲಕ್ಷ ಭಾವನೆ ಸರ್ಕಾರ ತಾಳಕೂಡದು. ಮಾನ್ಯ ಸದಸ್ಯರಾದ ಬಸವರಾಜ್‌ರವರು ಏನು ಹೇಳಿದರು ಆ ಪ್ರಕಾರ ಯುದ್ಧೋಪಾದಿಯಲ್ಲಿ ಸರ್ಕಾರ ಕೊಡಗಿನ ರಕ್ಷಣೆಗೆ ಬರಬೇಕೆಂದು ತಮ್ಮ ಮುಖಾಂತರ ಸರ್ಕಾರಕ್ಕೆ ನಿವೇದನೆ ಮಾಡಿಕೊಳ್ಳುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) : ಮಾನ್ಯ ಅಧ್ಯಕ್ಷರೆ, ಮಾನ್ಯ ಬಸವರಾಜ್ ಹಾಗೂ ಉಳಿದ ಸದಸ್ಯರು ಏನು ಪ್ರಸ್ತಾಪ ಮಾಡಿದರು, ಕೊಡಗಿನಲ್ಲಿ ಯಾವರೀತಿ ಮಳೆಯ ಒಂದು ದುಷ್ಪರಿಣಾಮ ಆಗುತ್ತಿದೆ, ಈ ರೀತಿಯ ಪರಿಸ್ಥಿತಿ ಇಡೀ ಮಲೆನಾಡಿನ ಜಿಲ್ಲೆಗಳಲ್ಲಿ ಇದೆ. ನಾನು ಮೊನ್ನೆ ಶನಿವಾರ ಭಾನುವಾರ ಊರಿಗೆ ಹೋಗಿದ್ದೆವು. ನಿನ್ನೆ ಇವತ್ತು ಫೋನ್ ಮಾಡಿ ಕೇಳಿದಾಗ ಅಲ್ಲಿರುವ ಶಾಲೆಗಳಿಗೆ ರಜೆಯನ್ನು ಕೊಡುತ್ತಿದ್ದೆವೆ. ಎಲ್ಲಾ ನದಿ ಹಳ್ಳಗಳು ತುಂಬಿ ಹೋಗುತ್ತಿವೆ. ಇದರಿಂದ ಮುಖ್ಯವಾಗಿ ರಸ್ತೆಗಳಿಗೆ ದೊಡ್ಡ ಪ್ರಮಾಣದಲ್ಲಿ ಹಾನಿಯಾಗಿದೆ. ನಾನು ಮಾನ್ಯ ರೇವಣ್ಣನವರನ್ನು ಅಭಿನಂದಿಸುತ್ತೇನೆ, ಇವತ್ತು ಬೆಳಿಗ್ಗೆ ನಮ್ಮ ಜಿಲ್ಲೆಯ ಶಾಸಕರು ಸಭೆಗಳನ್ನು ಮಾಡಿ ರಸ್ತೆ ರಿಪೇರಿಗೆ ತಕ್ಷಣ ಕ್ರಮ ತೆಗೆದುಕೊಳ್ಳುವುದಕ್ಕೆ ಸೂಚಿಸಿದ್ದಾರೆ. ಅದೇ ರೀತಿ ಕೆ.ಪಿ.ಟಿ.ಸಿ.ಎಲ್ ಅಧಿಕಾರಿಗಳಿಗೂ ಸಹ

ಅಲ್ಲಿ ಮರಗಳು ಬಿದ್ದು ಹಳ್ಳಿಗಳಲ್ಲಿ ಏನು ಕರೆಂಟ್ ಇರುವುದಿಲ್ಲ ಅದಕ್ಕೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕೆಂದು ಕೂಡ ಸೂಚಿಸಿದ್ದಾರೆ. ಅದುದರಿಂದ ಈ ಸಂದರ್ಭದಲ್ಲಿ ನಮ್ಮ ಕೇಂದ್ರ ಸರ್ಕಾರದಿಂದ ಬರುವಂತಹ ಪ್ರಕೃತಿ ವಿರೋಪ ನಿಧಿ ಏನಿದೆ ಅದು ರಾಜ್ಯ ಸರ್ಕಾರಕ್ಕೆ ಏನು ಬಂದಿದೆ ಅದರಿಂದ ಹಣ ಬಿಡುಗಡೆ ಆಗಬೇಕು. ಜೆಡ್‌ಪಿ ರೋಡ್, ಪಂಚಾಯತ್ ರೋಡ್ಸ್, ಸಿಡಿಗಳು ಇದಲ್ಲದೆ ಸಮುದ್ರ ಕೊರೆತದಂತಹ ದೊಡ್ಡ ದೊಡ್ಡ ವಿಷಯ ಇದೆ, ಈ ರೀತಿಯಾಗಿ ಅಲ್ಲಿ ಬಹಳ ದೊಡ್ಡ ಸಮಸ್ಯೆಗಳಾಗುತ್ತಿದೆ. ಅಲ್ಲಿರುವಂತಹ ಜನರು ಭಯಭೀತರಾಗಿದ್ದಾರೆ. ಈ ರೀತಿ ಹಿಂದೆಂದೂ ಇಲ್ಲದೆ ಇರುವಂತಹ ಗಾಳಿ ಮತ್ತು ಅಷ್ಟು ದೊಡ್ಡ ಪ್ರಮಾಣದಲ್ಲಿ ಮಳೆ ಆಗಿದೆ. ಆದುದರಿಂದ ಸರ್ಕಾರ ವಿಶೇಷವಾಗಿ ಅತಿವೃಷ್ಟಿ ಪರಿಹಾರ ನಿಧಿಯಿಂದ ತಕ್ಷಣ ಹಣವನ್ನು ಮಲೆನಾಡು ಜಿಲ್ಲೆಗಳಿಗೆ ಮಾಡಿಸಬೇಕಾದಂತಹ ಅಗತ್ಯ ಇದೆ. ಇದು ಶಿವಮೊಗ್ಗ ಜಿಲ್ಲೆಯಲ್ಲಿ ಇದೆ, ಚಿಕ್ಕಮಗಳೂರಿನಲ್ಲಿ ಇದೆ. ಕೊಡಗಿನದ್ದು ಉಲ್ಲೇಖ ಮಾಡಿದ್ದಾರೆ, ಅದೇ ರೀತಿ ದಕ್ಷಿಣ ಕನ್ನಡ ಮತ್ತು ಉಡುಪಿನಲ್ಲಿ ಇದರ ಪರಿಣಾಮವಾಗುತ್ತಿದೆ. ಹಾಗಾಗಿ ಸರ್ಕಾರದಿಂದ ತಕ್ಷಣ ಹಣ ಬಿಡುಗಡೆ ಮಾಡುವಂತಹ ಪ್ರಯತ್ನವಾಗಬೇಕು. ಮತ್ತು ಅಲ್ಲಿನ ಜನರಿಗೆ ಸರ್ಕಾರ ಸ್ಪಂದಿಸುತ್ತಿರುವುದರ ಬಗ್ಗೆ ಸರಿಯಾದಂತಹ ಸಂದೇಶವನ್ನು ಈ ಸದನದ ಮೂಲಕ ಕಳುಹಿಸುವಂತಹ ಕೆಲಸವಾಗಬೇಕು ಎಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುತ್ತಿದ್ದೇನೆ.

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೆ, ಈಗಾಗಲೇ ನಮ್ಮ ಹಿರಿಯ ಸದಸ್ಯರುಗಳು ಹೇಳಿದ ಹಾಗೆ, ಮಲೆನಾಡಿನ ಜಿಲ್ಲೆಗಳಲ್ಲಿ ವ್ಯಾಪಕವಾಗಿ ಮಳೆಯಾಗುತ್ತಿದೆ. ನಾವು ಮಳೆಯಾದರೆ ಸಂತೋಷವನ್ನು ಪಡೆಬೇಕು, ಏನೊ ಮಳೆಯಾಗುತ್ತಿದೆಯಲ್ಲಾ ಎಂದು. ಕಳೆದ ವರ್ಷವೂ ಒಳ್ಳೆಯ ಮಳೆಯಾಗಿತ್ತು, ಈ ವರ್ಷವೂ ಮಳೆ ಆಗುತ್ತಿದೆಯಲ್ಲಾ ಎಂದು. ಆದರೆ ಉಳಿದ ಭಾಗದವರೆಲ್ಲಾ ಸಂತೋಷ ಪಡುವಾಗ ನಮ್ಮ ಮಲೆನಾಡಿನ ಭಾಗದವರು ಆಳುವ ಹಾಗೆ ಆಗಿದೆ. ನಮಗೆ ಯಾವಾಗಲೂ ಸ್ಟೆಡೆ ಆಗಿ ಮಳೆ ಬಂದರೆ ನಮಗೆ ಏನೊ ತೊಂದರೆಯಾಗುವುದಿಲ್ಲ. ಆದರೆ ಒಂದೆರಡು ಮೂರು ದಿವಸಗಳಲ್ಲಿ ವರ್ಷದ ಮಳೆಯೆಲ್ಲಾ ಹುಯ್ದಾಗ ನಮಗೆ ಅನಾಹುತ ಆಗಿ ಹೋಗಿ ಬಿಡುತ್ತದೆ. ಈ ವರ್ಷ ನಮಗೆ ಆ ಪರಿಸ್ಥಿತಿಯಾಗಿದೆ. ಮಳೆಗಿಂತ ಹೆಚ್ಚು ಜಾಸ್ತಿ ಆಗಿದೆ. ವ್ಯಾಪಕವಾದ ಗಾಳಿಯಿಂದಾಗಿ ಅಡಿಕೆ ತೋಟಗಳಲ್ಲಿ ಹಳೆಯ ಮರಗಳು ಮುರಿದು ಹೋಗಿ ಬುಡ ಸೇರಿದೆ. ರೈತರಿಗೆ ಬಹಳ ದೊಡ್ಡ ಹಾನಿಯಾಗಿದೆ, ಮತ್ತೆ ಇದರಿಂದ, ವ್ಯಾಪಕವಾಗಿ ಅಡಿಕೆ ತೋಟದಲ್ಲಿ ಕೊಳೆ ರೋಗ ಬಂದಿದೆ. ಈವತ್ತು ಮೈಲ್‌ತುತ್ತದ ಧಾರಣೆ ಕಳೆದ ವರ್ಷ ಒಂದು ಕೆ.ಜಿ.ಗೆ 50 ರೂಪಾಯಿ ಇತ್ತು. ಈ ವರ್ಷ ಒಂದು ಕೆ.ಜಿ.ಗೆ 150ರ

ರೂಪಾಯಿಗಳು ಆಗಿದೆ. ಇದರಿಂದ ಯಾರೂ ರೈತರು ಅದನ್ನು ಮುಟ್ಟಿ ದ್ರಾವಣ ಸಿಂಪಡಣೆ ಮಾಡುವಂತಹ ಪರಿಸ್ಥಿತಿಯಲ್ಲಿ ಇಲ್ಲ. ಇಲ್ಲಿ ಎಲೆಕ್ಟ್ರಿಸಿಟಿ ಇಲ್ಲದೇ ಈಗಾಗಲೇ ಒಂದು ವಾರ, ಹದಿನೈದು ದಿವಸಗಳು ಆಗಿ ಹೋಗಿದೆ. ಅಲ್ಲಿ ಕತ್ತಲೆಯಲ್ಲಿ ಇದ್ದಾರೆ, ಮತ್ತೆ ಕುಡಿಯುವ ನೀರಿನ ಯೋಜನೆಗಳು ಸ್ಥಗಿತಗೊಂಡಿದೆ. ಸಾವಿರಾರು ಎಲೆಕ್ಟ್ರಿಸಿಟಿ ಕಂಬಗಳು ಮುರಿದು ಹೋಗಿದೆ. ಅದಕ್ಕಾಗಿ ಸರ್ಕಾರವು ವಿಶೇಷವಾದ ಆದ್ಯತೆಯನ್ನು ಕೊಟ್ಟು ವಾರಪಟ್ಟಿನಲ್ಲಿ ಮಲೆನಾಡಿನ ಈ ಭಾಗಗಳಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಬೇಕು. ಇನ್ನು ಇಲ್ಲಿ ರಸ್ತೆಗಳ ಬಗ್ಗೆಯೂ ಹೇಳಿದ್ದಾರೆ, ಮನೆಗಳು ಮತ್ತು ಸರ್ಕಾರಿ ಕಟ್ಟಡಗಳು ಸಾಕಷ್ಟು ದೊಡ್ಡ ಹಾನಿಯನ್ನು ಅನುಭವಿಸಿದೆ. ಈ ಹಿನ್ನಲೆಯಲ್ಲಿ ನಮ್ಮ ನೆರವಿಗೆ ಸರ್ಕಾರವೂ ಬರಬೇಕು. ಅದರಲ್ಲೂ ವಿಶೇಷವಾಗಿ ನಮ್ಮ ಅಡಿಕೆ ಬೆಳೆಗಾರರ ರೈತರ ದೃಷ್ಟಿಯಿಂದ ಮೈಲ್‌ತುತ್ತಕ್ಕೆ ಸರ್ಕಾರ ಸಹಾಯಧನವನ್ನು ಕೊಡಬೇಕು. ಅದರಲ್ಲೂ ವಿಶೇಷವಾಗಿ ನಮ್ಮ ಉತ್ತರ ಕನ್ನಡ, ದಕ್ಷಿಣ ಕನ್ನಡ, ಮತ್ತು ಶಿವಮೊಗ್ಗಕ್ಕೆ ಹೆಚ್ಚು ಹಣ ಕೊಡಬೇಕು. ಇದಕ್ಕೆ ನಮ್ಮ ಎ.ಪಿ.ಎಂ.ಸಿ.ಯಲ್ಲಿ ಹಣ ಇದೆ. ನೀವು ಸರ್ಕಾರದಿಂದ ಕೊಡುವುದು ಬೇಡ. ಈ ವಿಚಾರವನ್ನು ಮಾನ್ಯ ಎಂ.ಪಿ. ಪ್ರಕಾಶ್‌ರವರೆ, ತಾವು ದಯವಿಟ್ಟು ಗಮನ ಹರಿಸಿ. ಈಗ ಮಾನ್ಯ ರೆವಿನ್ಯೂ ಸಚಿವರು ಸದನಕ್ಕೆ ಬರುತ್ತಾರೆಂದು ಕಾಣುತ್ತದೆ. ನಮ್ಮ ಎ.ಪಿ.ಎಂ.ಸಿ.ಯಲ್ಲಿ 10, 15 ಕೋಟಿ ರೂಪಾಯಿಗಳು ಇದೆ. ಅದಕ್ಕಾಗಿ ವಿಶೇಷವಾದಂಥ ಆದೇಶವನ್ನು ಮಾಡಿ ಮೈಲ್‌ತುತ್ತವನ್ನು ಕೊಡುವ ವ್ಯವಸ್ಥೆಯನ್ನು ಮಾಡಿ. ಇಲ್ಲಿ ರೈತರು ಬೊಬ್ಬೆ ಹೊಡೆಯುತ್ತಿದ್ದಾರೆ. ಕಳೆದ 15 ದಿನಸಗಳಿಂದ ನಮಗೆ ಮೈಲ್‌ತುತ್ತಕ್ಕೆ ಸಬ್ಸಿಡಿಯನ್ನು ಕೊಡಿಯೆಂದು ಕೇಳಿದರೂ ಯಾರೂ ಕೊಡುವುದಿಲ್ಲ. ಅದುದರಿಂದ ಈ ಹಣವನ್ನು ಡೈವರ್ಟ್ ಮಾಡಿ, ಇದು ರೈತರೇ ಕೊಟ್ಟಿರುವಂಥ ಹಣವಾಗಿದೆ. ರೈತರ ಬೆಳೆಯಿಂದ ಮಾರ್ಕೆಟ್ ನೆಸ್‌ನಿಂದ ಸಂಗ್ರಹವಾಗಿರುವಂತಹ ಹಣವನ್ನು, ತಾವು ಈ ಸಂದರ್ಭದಲ್ಲಿ ರೈತರ ನೆರವಿಗೆ ಉಪಯೋಗ ಮಾಡಬೇಕೆಂದು ಹೇಳುತ್ತೇನೆ. ಇನ್ನು ಎಲೆಕ್ಟ್ರಿಸಿಟಿ ಮತ್ತು ರಸ್ತೆಗಳನ್ನು ದುರಸ್ತಿ ಮಾಡಬೇಕೆಂದು, ನಾನು ತಮ್ಮ ಮೂಲಕ ಸರ್ಕಾರವನ್ನು ವಿನಂತಿ ಮಾಡುತ್ತೇನೆ.

ಶ್ರೀ ಕೆ. ರಘುಪತಿ ಭಟ್ (ಉಡುಪಿ) : ಮಾನ್ಯ ಅಧ್ಯಕ್ಷರೆ, ನಮ್ಮ ಉಡುಪಿ ಜಿಲ್ಲೆಯಲ್ಲೂ ಮಳೆ ಸಾಕಷ್ಟು ಬೀಳುತ್ತಿರುವ ಸಂದರ್ಭದಲ್ಲಿ, ಈಗಾಗಲೇ ಮಾನ್ಯ ವಿಶ್ವೇಶ್ವರ ಹೆಗಡೆಯವರು ಹೇಳಿದಂತೆ, ಸಮುದ್ರದ ಕೊರೆತದಿಂದ ಬಹಳಷ್ಟು ಸಮಸ್ಯೆಗಳು ನಮ್ಮ ಜಿಲ್ಲೆಯಲ್ಲಿ ಆಗುತ್ತಾ ಇದೆ. ಕಳೆದ ವರ್ಷಕ್ಕಿಂತ ಈ ವರ್ಷ ಸಮುದ್ರ ಕೊರೆತದ ಪ್ರಮಾಣ ಬಹಳಷ್ಟು ಜಾಸ್ತಿ ಇದೆ. ನಿನ್ನೆ, ಮೊನ್ನೆ ನಾವು ಜಿಲ್ಲಾಧಿಕಾರಿಯವರೊಂದಿಗೆ ಕಾಪು ಕ್ಷೇತ್ರ ಮತ್ತು ಉಡುಪಿ ಕ್ಷೇತ್ರದಲ್ಲಿ ಕಡಲ ಕೊರತದ ಪ್ರದೇಶಗಳನ್ನು ಭೇಟಿ ಮಾಡಿಕೊಂಡು

ಬಂದೆವು. ಮಾನ್ಯ ಎಂ.ಪಿ. ಪ್ರಕಾಶ್‌ರವರು ಉಪ ಮುಖ್ಯಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ, ಆ ಪ್ರದೇಶಕ್ಕೆ ಭೇಟಿಯನ್ನು ಕೊಟ್ಟಿದ್ದಾರೆ. ಇಲ್ಲಿ ನಿನ್ನೆ ಮತ್ತು ಮೊನ್ನೆಯಿಂದ ಬಹಳ ಭಯಾನಕವಾದಂಥ ವಾತಾವರಣ ಇದೆ. ಒಂದು ಕಡೆ ಸಮುದ್ರ ಇದ್ದರೆ, ಒಂದು ನೂರು, ಇನ್ನೂರು ಮೀಟರ್ ಆಚೆಗೆ ನದಿ ಇದೆ. ಇವುಗಳ ಮಧ್ಯೆ ಒಂದೆರಡು ಮನೆಗಳು ಇವೆ. ಇಲ್ಲಿ ನೀರು ಮನೆಗಳ ಹಂಚಿನ ಮೇಲೆ ಬಿದ್ದು, ಅಪಾಯದ ಸ್ಥಿತಿಯಲ್ಲಿ ಇವೆ. ಇಲ್ಲಿ ಒಂದೆರಡು ಕುಟುಂಬಗಳನ್ನು ಅಲ್ಲಿಂದ ಸ್ಥಳಾಂತರಿಸುವ ಪರಿಸ್ಥಿತಿ ಬಂತು. ಇದನ್ನು ಜಿಲ್ಲಾಧಿಕಾರಿಗಳು ಬಂದು ಮಾಡಿದ್ದಾರೆ. ಆದರೆ ಸಮಸ್ಯೆ ಏನೆಂದರೆ ಇಲ್ಲಿ ತಾತ್ಕಾಲಿಕವಾಗಿ ಮರಳು ಚೀಲವನ್ನು ಕೊಡಬೇಕೆಂದು ಸರ್ಕಾರದಿಂದ ಆದೇಶ ಇದೆಯೆಂದು ಹೇಳುತ್ತಿದ್ದಾರೆ. ಅಷ್ಟು ದೊಡ್ಡ ಪ್ರಮಾಣದ ಕಡಲು ಕೊರೆತವನ್ನು ಮರಳು ಚೀಲದಿಂದ ತಡೆಯಲು ಸಾಧ್ಯವಿಲ್ಲ. ಇನ್ನೊಂದು ಪ್ರಕೃತ್ತಿ ವಿಕೋಪದಿಂದ ಬಂದಂತಹ ಹಣದಿಂದ ಕಡಲು ಕೊರೆತವನ್ನು ತಡೆಯುವುದಕ್ಕೆ ಆಗುವುದಿಲ್ಲವೆಂದು ರೆವಿನ್ಯೂ ಇಲಾಖೆಯಿಂದ ಆದೇಶ ಬಂದಿದೆಯೆಂದು ಹೇಳುತ್ತಿದ್ದಾರೆ. ಇವತ್ತು ಬಹಳ ಪ್ರಮುಖವಾಗಿ ಬೇಕಾಗಿರುವುದೆನೆಂದರೆ ಕಡಲು ಕೊರೆತವನ್ನು ತಡೆಯುವುದಕ್ಕೆ ಒಂದು ಪ್ರತ್ಯೇಕವಾದಂತಹ ಹಣವನ್ನು ಬಿಡುಗಡೆ ಮಾಡಬೇಕು. ಮಾನ್ಯ ಮುಖ್ಯಮಂತ್ರಿಯವರು ನಮ್ಮ ಜಿಲ್ಲೆಗೆ ಬಂದಂಥ ಸಂದರ್ಭದಲ್ಲಿ ಭರವಸೆಯನ್ನು ಕೊಟ್ಟಿದ್ದರು. ನಾವು ಕೇಂದ್ರ ಸರ್ಕಾರದಿಂದ ಹಣ ಬರದಿದ್ದರೆ, ರಾಜ್ಯ ಸರ್ಕಾರದಿಂದ ಹಣವನ್ನು ಉಪಯೋಗ ಮಾಡಿಕೊಂಡು ಅದರೂ ಕಡಲು ಕೊರೆತವಾಗುವಂಥಾದ್ದನ್ನು ಶಾಶ್ವತ ಪರಿಹಾರ ಮಾಡುತ್ತೇವೆಂದು ಹೇಳಿದ್ದರು. ಇವತ್ತು ಶಾಶ್ವತವಾದಂತಹ ಪರಿಹಾರವನ್ನು ಮಾಡುವುದರ ಜೊತೆಗೆ 400, 500 ಕುಟುಂಬಗಳು ಇಂತಹ ನದಿ ಮತ್ತು ಸಮುದ್ರಗಳ ಮಧ್ಯೆ ಭಯಾನಕವಾಗಿ ಅವರು ಜೀವಿಸುತ್ತಿರುವಂತಹ ಸಂದರ್ಭದಲ್ಲಿ, ಸರ್ಕಾರವು ತಕ್ಷಣ ಅವರ ರಕ್ಷಣೆಗೆ ಬಂದು ಕಡಲು ಕೊರೆತಕ್ಕೆ ತಾತ್ಕಾಲಿಕವಾಗಿ ಹಣವನ್ನು ಬಿಡುಗಡೆ ಮಾಡಬೇಕು. ಅದಕ್ಕೆ ಮರಳು ಚೀಲ ಅಲ್ಲ, ಕಲ್ಲು ಹಾಕುವಂಥಾದ್ದಕ್ಕೆ ಅವಕಾಶವನ್ನು ಮಾಡಿಕೊಡಬೇಕೆಂದು ನಾನು ಸರ್ಕಾರದ ಗಮನವನ್ನು ಸೆಳೆಯುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) : ಮಾನ್ಯ ಅಧ್ಯಕ್ಷರೆ, ನಮ್ಮಲ್ಲಿ ಒಂದು ಕಡೆ ಸಮುದ್ರದ ಕೊರೆತ, ಒಂದು ಕಡೆಯಲ್ಲಿ ನದಿಗಳ ಕೊರೆತ, ಮತ್ತೆ ಗಾಳಿ ಮಳೆಯಿಂದ ಮನೆಗಳು ಬೀಳುವಂಥಾದ್ದು. ಅದಕ್ಕೆ ಈಗ ಸಮುದ್ರದ ಕೊರೆತಕ್ಕೆ ದೊಡ್ಡ ದೊಡ್ಡ ಬಂಡೆಯನ್ನು ತೆಗೆದುಕೊಂಡು ಹೋಗಿ ಹಾಕುವುದಕ್ಕೆ ನಾವು ಶುರು ಮಾಡಿದ್ದೇವೆ. ಇಲ್ಲಿ ಮರಳು ಚೀಲವನ್ನು ಹಾಕಿದರೆ ನಿಲ್ಲುವುದಿಲ್ಲವೆಂದು, ನಾವು ಈಗ ಬಂಡೆಗಳನ್ನು ಹಾಕಲು ಶುರು ಮಾಡಿದ್ದೇವೆ. ನಮ್ಮ ಕ್ಷೇತ್ರದಲ್ಲಿ ಜಿಲ್ಲಾಧಿಕಾರಿಗಳ ಪರ್ಮಿಷನ್ ಅನ್ನು ತೆಗೆದುಕೊಂಡು ಶುರು ಮಾಡಿದ್ದೇವೆ.

ನಮಗೆ ಪ್ರತಿ ವರ್ಷ ಸಮಸ್ಯೆ ಏನೆಂದರೆ, ನಾವು ದೊಡ್ಡ ಕಲ್ಲು ಬಂಡೆಯನ್ನು ತೆಗೆದುಕೊಂಡು ಹೋಗಿ ಹಾಕಲು ಅದು ಲೋಡ್ ಜಾಸ್ತಿಯಾಗಿ ರಸ್ತೆಗಳು ಹಾಳು ಆಗುತ್ತಿವೆ. ಇಲ್ಲಿ ಶಾಶ್ವತವಾದ ಪರಿಹಾರವನ್ನು ಕಂಡುಹಿಡಿಯದೇ ಪ್ರತಿವರ್ಷ ನೀವು ಸಮುದ್ರ ಕೊರೆತಕ್ಕೆ ತಾತ್ಕಾಲಿಕವಾದ ತಡೆಗೋಡೆಯನ್ನು ಮಾಡುವಂಥಾದ್ದು ಒಂದು ಕಡೆ ಇರಲಿ. ರಸ್ತೆಗಳು ದುರಸ್ತಿ ಮಾಡುವ ಬಗ್ಗೆ ಮಳೆ ಬಿಟ್ಟ ಕೂಡಲೇ ಇನ್ನೊಂದು ಕಡೆಯಲ್ಲಿ, ಈ ವೆಚ್ಚವನ್ನು ನೋಡಿದರೆ, ಶಾಶ್ವತವಾದ ಕಾಮಾಗಾರಿಯನ್ನು ಒಂದೇ ಸಾರಿ ಮುಗಿಸಬೇಕಾಗುತ್ತದೆ. ಕೇರಳ ರಾಜ್ಯದವರು ಕೇಂದ್ರ ಸರ್ಕಾರದಿಂದ ಹಣವನ್ನು ತಂದು ಮಾಡುತ್ತಿದ್ದಾರೆ. ನಮ್ಮಲ್ಲಿ ಪ್ರತಿ ವರ್ಷ ನಾವು ನಮ್ಮ ಕಾಲದಿಂದಲೂ ಹೇಳುತ್ತಿದ್ದೇವೆ. ಕೇಂದ್ರ ಸರ್ಕಾರಕ್ಕೆ 140 ಕೋಟಿ ರೂಪಾಯಿಗಳ ಪ್ರಸ್ತಾವನೆ ಹೋಗಿದೆಯೆಂದು ಹೇಳುತ್ತಿದ್ದೀರಿ. ಇವತ್ತಿನವರೆಗೂ ಅದು ಅನುಮೋದನೆಯಾಗಿ ಹಣ ಬಂದಿದ್ದು ಇಲ್ಲ. ಅದಕ್ಕೆ ವರ್ಷ ವರ್ಷವೂ ರಾಜ್ಯ ಸರ್ಕಾರದಿಂದ ಮಾಡಿಸುವಂತಹ ಪ್ರಯತ್ನವನ್ನು ಮಾಡಬೇಕು ಇಲ್ಲವಾದರೆ ನಮ್ಮ ರಸ್ತೆಗಳು ಸಮುದ್ರ ಕೊರೆತದಿಂದ ಉಳಿಯುವುದಿಲ್ಲ, ತೆಂಗಿನ ಮರಗಳು ಹೋಗುವಂಥಾದ್ದು, ಮೆನಗಳು ಹೋಗುವಂಥಾದ್ದು, ನಾವು ಇದನ್ನು ದಿನನಿತ್ಯ ಕಾಣುವಂಥಾದ್ದು ಆಗಿದೆ. ತಾವು ಕರಾವಳಿಗೆ ಭೇಟಿಯನ್ನು ಕೊಟ್ಟರೆ, ನಾವು ಜನರ ಹತ್ತಿರ ಹೋಗಿ ಬೈಸಿಕೊಂಡು ಬಂದಿದ್ದೇವೆ. ನೀವು ಇಲ್ಲಿ ಬಂದು ನೋಡಿಕೊಂಡು ಹೋಗುತ್ತೀರಿ, ಕೆಲಸವನ್ನು ಮಾಡುವುದಿಲ್ಲವೆಂದು ಹೇಳುತ್ತಾರೆ. ಅದಕ್ಕೋಸ್ಕರ ನಿನ್ನೆಯಿಂದ ನಾವು ಕೆಲಸವನ್ನು ಪ್ರಾರಂಭ ಮಾಡಿಸಿದ್ದೇವೆ. ಅದಕ್ಕೆ ಹಣವನ್ನು ಬಿಡುಗಡೆ ಮಾಡುವಂಥಾದ್ದು, ಮತ್ತೆ ಹಣವನ್ನು ಜಿಲ್ಲಾಧಿಕಾರಿಗಳಿಗೆ ಕಳಹಿಸುವಂತಹ ವ್ಯವಸ್ಥೆ ಮಾಡಬೇಕೆಂದು ನಾನು ತಮ್ಮ ಮುಖೇನಾ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸೊರಬ) : ಮಾನ್ಯ ಅಧ್ಯಕ್ಷರೆ, ನಾನು ಈಗ ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಏನು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ಸಂಬಂಧಪಟ್ಟಂತೆ ಬ್ರಹ್ಮಪುತ್ರಕ್ಕೆ ಒಂದು ಅಥಾರಿಟಿಯನ್ನು ಮಾಡಿ, ಎಂಟೈರ್ ನಾರ್ಥ್ ಈಸ್ಟರ್ನ್ ಸ್ಟೇಟ್‌ಗೆ ಎಂದು ಒಂದು ವಿಶೇಷವಾದಂತಹ ಕಮಿಟಿಯನ್ನು ಮಾಡಿ, ಪ್ರತಿವರ್ಷವೂ ಕೇಂದ್ರ ಸರ್ಕಾರದವರು ಕೊಡುತ್ತಿದ್ದಾರೆ. ಅದೇ ರೀತಿಯಲ್ಲಿ ಕಡಲು ಕೊರೆತಕ್ಕೆ ಮತ್ತೆ ವಿಶೇಷವಾಗಿ ನದಿಗಳ ಕೊರೆತಕ್ಕೆ ಎಂದು ಹೇಳಿ ನಾವು ಒಂದು ಪ್ರಸ್ತಾವನೆಯನ್ನು ಕಳುಹಿಸಿ ಬಹಳ ವರ್ಷಗಳು ಆಗಿದೆ. ಸುಮಾರು ನಾಲ್ಕೈದು ವರ್ಷಗಳ ಮೇಲೆ ಆಗಿದೆ. ಈಗ ಕಡಲು ಕೊರೆತದ ಬಗ್ಗೆ ಪ್ರಸ್ತಾವನೆಯನ್ನು ಮಾಡಿದ್ದಾರೆ. ಈಗಾಗಲೇ ದೊಡ್ಡ ದೊಡ್ಡ ಬಂಡೆಗಳನ್ನು ಹಾಕುವಂಥಾದ್ದಕ್ಕೆ ತನ್ನದೇ ಆದಂತಹ ಅಡ್‌ವಾಂಟೇಜ್ ಇದೆ, ಡಿಸ್ ಅಡ್‌ವಾಂಟೇಜಸ್

ಇದೆ. ಅದಕ್ಕೆ worn-out tyres ಏನು ಇದೆ, ಅದರಲ್ಲಿ ಫ್ರೆಂಚ್ ಮತ್ತು ನ್ಯೂಜಿಲ್ಯಾಂಡ್‌ನಲ್ಲಿ ಈ ರೀತಿ ಮಾಡುತ್ತಿದ್ದಾರೆಂದು, ಅದನ್ನು ಕೂಡ ನಾವು ಮಾಡಬೇಕೆಂದು ಬಹಳಷ್ಟು ಪ್ರಮಾಣದಲ್ಲಿ ಸರ್ಕಾರದ ಗಮನಕ್ಕೆ ಮತ್ತು ಇಲಾಖೆಯವರ ಗಮನಕ್ಕೆ ತಂದು ಅದನ್ನು ವರ್ಕ್ ಔಟ್ ಮಾಡಿದ್ದೇವೆ. ಈ ಕಡಲು ಕೊರೆತವಾಗುವಂಥಾದ್ದು ಅಂಡರ್ ಕರೆಂಟ್ ಸೀನಿಂದ ಬರುತ್ತದೆ. ಅದು ದಡಕ್ಕೆ ಹೊಡೆದು ಮರಗಳು ಕೊಚ್ಚಿಕೊಂಡು ಬರುತ್ತದೆ. ಆ ಕರೆಂಟ್ ಏನು ಬರುತ್ತದೆ. ಅದನ್ನೇ ಕಟ್ ಮಾಡಬೇಕೆಂದು, ಯೂಸ್ಡ್ ಟೈರ್‌ಗಳನ್ನು ಬಳಕೆ ಮಾಡಿ, ಆ ಕರೆಂಟ್ ಅನ್ನು ತಪ್ಪಿಸುಬೇಕೆಂದು, ಆಗ ಮಾಡಿದ್ದೆವು. ಇದು ಬಹಳ ಕಡಿಮೆಯಾಗುತ್ತದೆ, ಮತ್ತೆ ಯಾವುದೇ ಕಾರಣಕ್ಕೂ ಈಗ ಕಲ್ಲು ಹೇಗೆ ಮರಳಿನಲ್ಲಿ ಸಿಂಕ್ ಆಗಿ ಹೋಗುತ್ತದೆ, ಆ ರೀತಿಯಲ್ಲಿ ಇದು ಸಿಂಕ್ ಆಗುವುದಿಲ್ಲಿ. Initially we had worked out on tyres also ಇದನು ಎಲ್ಲೆಲ್ಲಿ ತರಿಸಬೇಕು, ಎಂಬ ಬಗ್ಗೆ ಏನು ತೊಂದರೆ ಇಲ್ಲ. ಏಕೆಂದರೆ ಇದು ಎಲ್ಲಾ used tyres ಆಗಿರುತ್ತವೆ ಆ ಸೇಮ್ ಸಿಸ್ಟಂನಲ್ಲಿ ಕರೆಂಟ್ ಉತ್ಪಾದನೆಯನ್ನು ಉತ್ಪಾದನೆ ಮಾಡುವುದಕ್ಕೆ ಪ್ರಾವಿಜನ್ ಇದೆ. ಹಾಗಾಗಿ ಅದಕ್ಕೆ ವಿಶೇಷವಾದ ಗಮನವನ್ನು ಕೊಟ್ಟರೆ, ನಮಗೆ ಅದರಲ್ಲೂ ಕಡಲು ಕೊರತದ ಬಗ್ಗೆ ಮಂಗಳೂರಿನ ಕರಾವಳಿ ಏನು ಇದೆ, ಈಗ ನಾನು ಬೆಳಿಗ್ಗೆ ಆ ಭಾಗಗಳಿಗೆ ಬಹಳ ಅನುಕೂಲವಾಗುತ್ತದೆ. ಪೂನದಲ್ಲಿ ಈಗ ವಿಶೇಷವಾದ ರೀತಿಯಲ್ಲಿ ಸ್ಟಡಿ ಮಾಡುತ್ತಿದ್ದಾರೆಂದು ತಮ್ಮ ಉತ್ತರದಲ್ಲೂ ನೋಡಿದೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ವಿಶೇಷವಾದ ಸ್ಟಡಿ ಏಕೆ? ಹಿಂದಿನ ಸರ್ಕಾರದಲ್ಲಿ ಮಂತ್ರಿಯವರು ಫ್ರೆಂಚಿಗೆ ಹೋಗಿ ಬರಲಿಲ್ಲವೇ? ಫ್ರೆಂಚ್ ಟೆಕ್ನಾಲಜಿ ಮಾಡುತ್ತೇವೆಂದು ಹೇಳಿದರು. ಆದರೆ ಇನ್ನೂ ಏನೂ ಆಗಲಿಲ್ಲ.

ಶ್ರೀ ಎಸ್. ಕುಮಾರ್ ಬಂಗಾರಪ್ಪ : ಇದಕ್ಕೆ ಬಹಳಷ್ಟು ಕೆಲಸ ಕಾರ್ಯಗಳು ಆಗಿವೆ. ಅದಕ್ಕೆ ತಾವು ಸ್ವಲ್ಪ ಒತ್ತು ಕೊಟ್ಟರೆ, ಬಹಳಷ್ಟು ನಮಗೆ ಅನುಕೂಲಗಳು ಆಗುತ್ತವೆ.

ಶ್ರೀ ಕೆ. ಅಭಯಚಂದ್ರ (ಮೂಡಬಿದ್ರಿ) : ಮಾನ್ಯ ಅಧ್ಯಕ್ಷರೆ, ಈಗ ಸಮುದ್ರ ಕೊರೆತದ ಬಗ್ಗೆ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ವಿಶೇಷವಾದ ಮಳೆಯಿಂದಾಗಿ ಅಲ್ಲಿ ನದಿ ಕೊರೆತ ಕೂಡ ಇದೆ. ಅಲ್ಲಿ ನದಿಗಳಲ್ಲಿ ವಿಶೇಷವಾಗಿ ನೀರು ಹರಿಯುವುದರಿಂದ ನದಿ ಕಡೆಗಳಲ್ಲೂ ಕೊರೆತ ಇದೆ. ಅದು ಎಲ್ಲಿಯವರೆಗೂ ಎಂದರೆ ಕಳೆದ ಎರಡು, ಮೂರು ದಿವಸಗಳಲ್ಲಿ ವಿಶೇಷವಾದ ಮಳೆಯಿಂದಾಗಿ ನದಿ ಮತ್ತು ಅಲ್ಲಿಯ ಗಡ್ಡೆಗಳು ಒಂದೇ ರೀತಿಯಾಗಿದ್ದು, ಅಲ್ಲಿ ಇದ್ದಂತಹ ಎಲ್ಲಾ ಕೃಷಿಯೂ ನಾಶವಾಗಿದೆ. ಅಲ್ಲಿಯ ನದಿಗಳಿಗೂ ಕೂಡ ನದಿಗೆ ಸೈಡ್ ಕಟ್ಟುವಂತಹ ವ್ಯವಸ್ಥೆಯನ್ನು ಸಣ್ಣ ನೀರಾವರಿ ಇಲಾಖೆಯ ಮುಖಾಂತರ

ಆಗಬೇಕಾಗಿದೆ. ಅದು ಅಲ್ಲದೇ ಮೊನ್ನೆ ಜಿಲ್ಲೆಯಲ್ಲಿ ಇದ್ದಂತಹ ಸಂದರ್ಭದಲ್ಲಿ ವಿಶೇಷವಾದಂತಹ ಮಳೆಯಿಂದಾಗಿ, ಅಲ್ಲಿ ದೋಣಿಯನ್ನು ಒದಗಿಸಬೇಕೆಂದು ಅಲ್ಲಿಯ ಜನರ ಬೇಡಿಕೆ ಇತ್ತು. ಇಲ್ಲಿ ನಮ್ಮ ಉಡುಪಿ ಜಿಲ್ಲೆಯ ಉಸ್ತುವಾರಿ ಸಚಿವರು ಇದ್ದಾರೆ. ಅವರಿಗೂ ಕೂಡ ಅಲ್ಲಿನ ವಾಸ್ತವಾಂಶ ಗೊತ್ತಿದೆ. ಇವತ್ತು ಉಡುಪಿ ಜಿಲ್ಲೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿಶೇಷವಾಗಿ ಸಮುದ್ರಕ್ಕೆ ನದಿಗಳು ಸೇರುವಂತಹ ಪ್ರದೇಶಗಳಲ್ಲಿ ಅಲ್ಲಿ ಸರಾಗವಾಗಿ ನದಿಯ ನೀರು ಸಮುದ್ರಕ್ಕೆ ಹೋಗುವುದಿಲ್ಲ. ಸಮುದ್ರದಲ್ಲಿ ವಿಶೇಷವಾದಂಥ ಅಲೆಗಳು ಬರುವಂತಹ ಸಂದರ್ಭಗಳಲ್ಲಿ ಈ ನದಿ ನೀರು ಅಲ್ಲಿನ ಗದ್ದೆಗಳಿಗೆಲ್ಲಾ ಹೋಗಿ, ಕೃಷಿಕರಿಗೆಲ್ಲಾ ಬಹಳ ತೊಂದರೆಯಾಗಿದೆ. ಎಷ್ಟೋ ಮನೆಗಳನ್ನು ಈ ಸಂದರ್ಭದಲ್ಲಿ ಮುಳುಗಿವೆ. ಇದು ಮುಳುಗಿರುವುದರಿಂದಾಗಿ ಮಕ್ಕಳು ಶಾಲೆಗೆ ಬರುವುದಕ್ಕೆ ಆಗಿಲ್ಲ. ಮನೆಯಲ್ಲಿ ಇರುವವರೂ ಸಹಿತ ದೀಪಗಳಲ್ಲದೆ ಇರುವಂತಹ ಪರಿಸ್ಥಿತಿ ಉಂಟಾಗಿದೆ. ಅಲ್ಲಿ ವಾಸ ಮಾಡುವಂತಹ ಜನರಿಗೆ ಈ ಸಂದರ್ಭಗಳಲ್ಲಿ ದೋಣಿಗಳನ್ನು ಒದಗಿಸುವಂತಹ ಕೆಲಸ ಸರ್ಕಾರದ ಮುಖಾಂತರ ಆಗಬೇಕಾಗಿದೆ. ಈ ಎರಡು ಜಿಲ್ಲೆಗಳಿಗೆ ವಿಶೇಷವಾಗಿ ವಿಶೇಷವಾದಂತಹ ಮಳೆಯಿಂದ, ಈ ನದಿಗಳ ಬದಿಗಳಲ್ಲಿ ವಾಸ ಮಾಡುವಂತಹ ಜನರಿಗೆ ರಕ್ಷಣೆಯನ್ನು ಕೊಡುವ ಕೆಲಸ ಮತ್ತು ಅವರ ಕೃಷಿ ಭೂಮಿಯನ್ನು ರಕ್ಷಿಸುವಂತಹ ಕೆಲಸವನ್ನು ಕೂಡ ಸರ್ಕಾರದ ಮುಖಾಂತರ ಮಾಡಬೇಕಾಗಿದೆ.

ಶ್ರೀ ಲಾಲಾಜಿ ಆರ್. ಮೆಂಡನ್ (ಕಾಪು) : ಮಾನ್ಯ ಅಧ್ಯಕ್ಷರೇ, ಕಳೆದ ಎರಡು ದಿವಸಗಳಿಂದ ವಿಪರೀತವಾದ ಕಡಲಕೊರೆತವಾಗುತ್ತಿದೆ. ಈಗಾಗಲೇ ನಾನು, ಉಡುಪಿಯ ಶಾಸಕ ಮಿತ್ರರಾದ ರಘುಪತಿ ಭಟ್‌ರವರು, ಉಡುಪಿಯ ಜಿಲ್ಲಾಧಿಕಾರಿಯವರು ಮತ್ತು ಸ್ಥಳೀಯ ಜನಪ್ರತಿನಿಧಿಗಳೆಲ್ಲರೂ ಸೇರಿಕೊಂಡು ಕಡಲೂಕೊರೆತದ ಪ್ರದೇಶಕ್ಕೆ ಭೇಟಿ ಕೊಟ್ಟಿದ್ದೇವೆ. ಕರ್ನಾಟಕ ಭಾಗದ ಕರಾವಳಿಯ ಸುಮಾರು 300 ಕಿ.ಮೀ. ವ್ಯಾಪ್ತಿಯಲ್ಲಿ ಇರುವಂಥ ಸ್ಥಳಗಳಲ್ಲಿ ಮುಖ್ಯವಾಗಿ ಉಡುಪಿ ಜಿಲ್ಲೆ ಬರುತ್ತದೆ. ಈ ಭಾಗದಲ್ಲಿ 5–6 ಕಡೆಗಳಲ್ಲಿ ವಿಪರೀತವಾದಂಥ ಕಡಲಕೊರೆತ ಆಗುತ್ತಿದೆ. ಹಾಗಾಗಿ, ತಕ್ಷಣ ಸಮುದ್ರದ ತಡೆಗೋಡೆಗೆ ಕಲ್ಲನ್ನು ಹಾಕುವಂಥ ವ್ಯವಸ್ಥೆ ಆಗಬೇಕಾಗಿದೆ. ಹೊರದೇಶಗಳಿಗೆ ಗ್ರಾನೈಟ್ ರಫ್ತು ಆಗುವಂಥ ಸಂದರ್ಭದಲ್ಲಿ, ಅದರ ವೇಸ್ಟ್ ಕಲ್ಲುಗಳು ಇರುತ್ತವೆ. ಸಂಬಂಧಪಟ್ಟವರಿಗೆ ಹೇಳಿ ಅದನ್ನು ಸಮುದ್ರದ ತಡೆಗೋಡೆಗೆ ಹಾಕಿಸುವಂಥ ಪ್ರಯತ್ನವನ್ನು ಜಿಲ್ಲಾಧಿಕಾರಿಗಳು ಪ್ರಾರಂಭಿಸಿದ್ದಾರೆ. ಆದರೆ ಶಾಸ್ವತವಾದ ಉತ್ತಮ ತಡೆಗೋಡೆ ವ್ಯವಸ್ಥಿತವಾಗಿ ಆಗಬೇಕಾಗಿದೆ. ನನ್ನ ಕಾಪು ಕ್ಷೇತ್ರದಲ್ಲಿನ ಪಡುಬಿದ್ರೆ ಇತ್ಯಾದಿ ಪ್ರದೇಶಗಳು, ಹಾಗೆಯೇ ಉಡುಪಿಯ ಮಲ್ಪೆ ಕ್ಷೇತ್ರದ ಕೆಲವು ಪ್ರದೇಶಗಳಲ್ಲಿ ವಿಪರೀತವಾದ ಕಡಲಕೊರೆತವಾಗುತ್ತಿದ್ದು, ತಕ್ಷಣ ಅದರ ಬಗ್ಗೆ ಕ್ರಮ ಕೈಗೊಳ್ಳಬೇಕಾಗಿ ನಾನು ತಮ್ಮ ಮೂಲಕ ಸರ್ಕಾರವನ್ನು ಆಗ್ರಹಿಸುತ್ತಿದ್ದೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗೃಹ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ಈ ಎಲ್ಲಾ ವಿಷಯಗಳ ಬಗ್ಗೆ ಲೋಕೋಪಯೋಗಿ ಸಚಿವರಾದ ಮಾನ್ಯ ರೇವಣ್ಣನವರು ನಿನ್ನೆ, ಕಡಲ ಪ್ರದೇಶದಲ್ಲಿರತಕ್ಕಂಥ ಮತ್ತು ಮಲೆನಾಡಿನ ಪ್ರದೇಶದಲ್ಲಿರತಕ್ಕಂಥ ಶಾಸಕರುಗಳನ್ನು ಕರೆಸಿ, ರಸ್ತೆಗಳ ದುರಸ್ತಿಗೆ ಸಂಬಂಧಪಟ್ಟಂತೆ ಅವರ ಜೊತೆ ವಿಚಾರ ವಿನಿಮಯವನ್ನು ಮಾಡಿದ್ದಾರೆ. ಅವರು ಶಾಸಕರನ್ನು ಸಂಪರ್ಕ ಮಾಡಿ, ಪರಿಸ್ಥಿತಿಯನ್ನು ಅಧ್ಯಯನ ಮಾಡಿ, ಅವುಗಳಿಗೆ ಹೆಚ್ಚಿನ ಅನುದಾನವನ್ನು ಕೊಡುತ್ತೇವೆ ಎಂದು ಹೇಳಿದ್ದಾರೆ. ಈಗ ಇನ್ನೂ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಬಸವರಾಜುರವರು ವಿಚಾರವನ್ನು ಪ್ರಸ್ತಾಪ ಮಾಡಿದ ಮೇಲೆ, ಅನೇಕ ಶಾಸಕರು ವಿಷಯವನ್ನು ಪ್ರಸ್ತಾಪ ಮಾಡಿದ್ದು, ಅದಕ್ಕೆ ಪ್ರಕೃತಿ ವಿಕೋಪ ನಿಧಿಯಿಂದ ತಕ್ಷಣ ಹಣವನ್ನು ಕೊಡಬೇಕಾಗಿದೆ. ಈ ವರ್ಷ ಪ್ರಕೃತಿ ವಿಕೋಪ ನಿಧಿಗೆ ಹಣ ಎಷ್ಟು ಬಂದಿದೆ ಎನ್ನವುದನ್ನು ಮಾನ್ಯ ಕಂದಾಯ ಸಚಿವರ ಜೊತೆ ಸಮಾಲೇಚನೆ ಮಾಡಿದ ಮೇಲೆ, ಹಿಂದೆ ಪ್ರವಾಹ ಪೀಡಿತ ಪ್ರದೇಶಗಳಿಗೆ ಹೆಚ್ಚಿನ ಹಣವನ್ನು ಕೊಡುವಂಥ ಕೆಲಸವನ್ನು ಯಾವ ರೀತಿ ಮಾಡಿದ್ದರೋ ಅದೇ ರೀತಿ ಈಗ ಮಾಡಬೇಕಾಗಿದೆ. ಹಿಂದೆ ಪ್ರವಾಹದಿಂದ ಹಾನಿಯಾದಂಥಾದ್ದು ಒಂದು ಎಕರೆ ನೀರಾವರಿ ಜಮೀನಾಗಿದ್ದರೆ ಅದಕ್ಕೆ ಒಂದು ಸಾವಿರ ರೂಪಾಯಿ, ಖುಷ್ಕಿ ಜಮೀನಾಗಿದ್ದರೆ 400 ರೂಪಾಯಿ, ಮನೆಗಳು ಬಿದ್ದು ಹೋಗಿದ್ದರೆ ಅಥವಾ ಸಂಪೂರ್ಣ ಜಖಂ ಆದಂಥ ಮನೆಗಳಿಗೆ 10 ಸಾವಿರ ರೂಪಾಯಿ, ಹೀಗೆ ಹಾನಿಯ ಪ್ರಮಾಣಕ್ಕನುಗುಣವಾಗಿ ಅನುಪಾತದಲ್ಲಿ ತಹಶೀಲ್ದಾರ್‌ರವರು ಪರಿಹಾರವನ್ನು ಕೊಡಬೇಕು ಎಂದು ಆಗಿತ್ತು. ಅದೇ ರೀತಿ, ಕುರಿ ಮೊದಲಾದ ಜಾನುವಾರುಗಳ ಪ್ರಾಣ ಹಾನಿಯಾಗಿದ್ದರೆ, ಅದಕ್ಕೆ ಸಂಬಂಧಪಟ್ಟಂತೆ ಐ ಆರ್‌ಡಿಪಿಯಲ್ಲಿರತಕ್ಕಂಥ ನೀತಿ ನಿಯಮಗಳಿಗೆ ಅನುಗುಣವಾದ ರೀತಿಯಲ್ಲಿ ಹಣವನ್ನು ಕೊಡಬೇಕು ಎಂದು ಆ ಸಂದರ್ಭದಲ್ಲಿ ಮಾಡಿದ ಆಜ್ಞೆಯನ್ನು ಇವತ್ತೂ ಮುಂದುವರಿಸಬೇಕಾಗಿದೆ. ಅಂದರೆ, ಇದು ಪ್ರವಾಹಕ್ಕೆ ಸಂಬಂಧಪಟ್ಟಿರತಕ್ಕಂಥಾದ್ದು ಆಗಿದ್ದು ಪ್ರಕೃತಿ ವಿಕೋಪದ ಈ ಸಂದರ್ಭದಲ್ಲಿಯೂ ಅದೇ ದೃಷ್ಟಿಕೋನವನ್ನು ಇಟ್ಟುಕೊಳ್ಳಬೇಕಾಗಿದೆ. ಈ ಬಗ್ಗೆ ತಹಶೀಲ್ದಾರ್‌ರವರು ತಮ್ಮ ಕಡೆಯಿಂದ ವರದಿಯನ್ನು ಕಳುಹಿಸಿಕೊಟ್ಟಿದ್ದಾರೆ. ಮಾನ್ಯ ಜೀವಿಜಯರವರು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಕೊಡಗು, ಸಕಲೇಶಪುರ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಈ ರೀತಿ ಪ್ರವಾಸ ಉಂಟಾಗುವಂಥ ರೀತಿಯಲ್ಲಿ ಧಾರಾಕಾರವಾಗಿ ಮಳೆ ಬಿದ್ದಿರುವ ಕಾರಣದಿಂದ ತತ್‌ಕ್ಷಣವೆ ಅವರ ಸಹಾಯಕ್ಕೆ ಬರಬೇಕಾಗಿರತಕ್ಕಂಥಾದ್ದು ಸರ್ಕಾರದವರಾದ ನಮ್ಮ ಆದ್ಯ ಕರ್ತವ್ಯ. ಆ ಕಾರಣಕ್ಕಾಗಿ, ಮಾನ್ಯ ಮುಖ್ಯಮಂತ್ರಿಗಳು ಹಾಗೂ ಉಪ ಮುಖ್ಯಮಂತ್ರಿಗಳು ಮಲೆನಾಡು ಪ್ರದೇಶಗಳ ಭಾಗದ ಶಾಕರನ್ನು ಎರಡು ದಿವಸಗಳೊಳಗಾಗಿ ಕರೆಸಿ, ಹೆಚ್ಚು ಮಳೆ ಬಂದಂಥ

ಪ್ರದೇಶಗಳಲ್ಲಿ ಉಕ್ಕಿ ಹರಿಯುತ್ತಿರುವ ನದಿಗಳಿಂದ ಹಾನಿ ಆಗಿರುವಂಥಾದ್ದರ ಬಗ್ಗೆ ಒಂದು ಸಭೆಯನ್ನು ಮಾಡಿ, ವರದಿಯನ್ನು ತರಿಸಿಕೊಂಡು ಆ ಮೂಲಕವಾಗಿ ಹಣ ಕೊಡುವಂಥಾದ್ದನ್ನು ನಾವು ಕೊಡಬೇಕಾಗುತ್ತದೆ. ಜೀವಿಜಯರವರು, ಬಸವರಾಜುರವರು ಬಹಳ ನೊಂದ ಮನಸ್ಸಿನಿಂದ ಹೇಳಿದರು. ಬೆಂಗಳೂರಿನವರ ಕಾವೇರಿ ಕುಡಿಯುವ ನೀರಿನ ವಿಚಾರದಲ್ಲಿ ಅಥವಾ ಮಂಡ್ಯ ಜಿಲ್ಲೆಯಲ್ಲಿ ನೀರಾವರಿಗೆ, ಕುಡಿಯುವ ನೀರಿಗೆ ಎಲ್ಲಾ ಅನುಕೂಲಗಳನ್ನು ಮಾಡಿಕೊಡುತ್ತೀರಿ, ಆದರೆ ನಮ್ಮ ಬವಣೆಯನ್ನು ಯಾರೂ ಕೇಳುವುದಿಲ್ಲ ಎನ್ನುವ ಮಾತನ್ನು ಹೇಳಿದರು. 'ನೇಕಾರನ ಹೆಂಡತಿ ಬೆತ್ತೆಲೆ' ಎನ್ನುವ ಒಂದು ಗಾದೆ ಮಾತಿರುವುದು ತಮಗೆಲ್ಲಾ ಗೊತ್ತಿರುವಂಥಾದ್ದೇ. ಯಾರು ದುಡಿಯುತ್ತಾರೆ, ಯಾರು ಕಷ್ಟಪಡುತ್ತಾರೆ, ಅವರಿಗೆ ಅದರ ಪ್ರಯೋಜನ ಸಿಗುವುದಿಲ್ಲ. ಅಭಿವೃದ್ಧಿಗಾಗಿ ನಾವು ಕೊಡಬೇಕಾದಂಥ ಒಂದು ಬೆಲೆ ಅದು. ನಮ್ಮಲ್ಲಿಯೂ ಕೂಡ ಹಿಂದೆ ಹಾಗೇ ಆಗಿತ್ತು. ನಮ್ಮಲ್ಲಿ ತುಂಗಭದ್ರಾ ಅಣೆಕಟ್ಟು ಕಟ್ಟಿದಾಗ ಅಲ್ಲಿನ ಜಲಾನಯನ ಪ್ರದೇಶದಲ್ಲಿ ಮುಳುಗಿ ಹೋದಂಥ ಗ್ರಾಮದವರು ನಾವು ಆ ಕಾರಣಕ್ಕಾಗಿ, ನಾವು ಅಭಿವೃದ್ಧಿಗೆ ಕೊಡುವಂಥ ಬೆಲೆ ತೀರಾ ವಿಪರೀತವಾಗಿರತಕ್ಕಂಥಾದ್ದಾಗಿದೆ ಎಂದು ಹೇಳುತ್ತೇನೆ. ಆ ಕಾರಣಕ್ಕಾಗಿ ಅವರಿಗೆ ಒಂದು ವಿಶೇಷವಾಗಿರತಕ್ಕಂಥ ಒಂದು ಸ್ಥಾನವಿದೆ. ಕೊಡಗಿನವರಿಗೆ ಯಾವುದೇ ಸಂದರ್ಭದಲ್ಲೂ ಸಹ ನಮ್ಮನ್ನು ಕಡೆಗಣಿಸಿದ್ದಾರೆ ಎನ್ನುವ ಭಾವನೆ ಬರಬಾರದು. ಏಕೆಂದರೆ, ರಾಜಕೀಯವಾಗಿ ಅದು ಬಹಳ ದೀರ್ಘವಾಗಿ ಹೋಗತಕ್ಕಂಥಾದ್ದಾಗಿದೆ. ಕೊಡಗನ್ನು ಪ್ರತ್ಯೇಕ ರಾಜ್ಯ ಮಾಡಬೇಕೆನ್ನುವ ಚಳುವಳಿ ಕೂಡ ಪ್ರಾರಂಭವಾಗಿದೆ. ಮಾನ್ಯ ವಾಟಾಳ್ ನಾಗರಾಜ್‌ರವರು ಇದೇ ಸದನದಲ್ಲಿ ಈ ವಿಷಯದ ಬಗ್ಗೆ ಎಚ್ಚರಿಸಿದ್ದರು. ಬೇರೆಬೇರೆ ಸಮಸ್ಯೆಗಳು ಬಂದಾಗ, ಅಭಿವೃದ್ಧಿಯೇ ಆ ಸಮಸ್ಯೆಗಳಿಗೆ ತಾರಕ ಮಂತ್ರವಾಗಬೇಕು ಮತ್ತು ಈಗ ಅವರ ಕಷ್ಟ ಕಾರ್ಪಣ್ಯಗಳಿಗೆ ಸರ್ಕಾರ ಬೇಗನೆ ಸ್ಪಂದಿಸಬೇಕಾಗಿರುವುದರಿಂದ ನಾಳೆ ನಾಡಿದ್ದರೊಳಗಾಗಿ ಮುಖ್ಯಮಂತ್ರಿಗಳು ಹಾಗೂ ಉಪ ಮುಖ್ಯಮಂತ್ರಿಗಳು ಸಂಬಂಧಪಟ್ಟಿರತಕ್ಕಂಥ ಎಲ್ಲಾ ಶಾಸಕರನ್ನು ಕರೆಸಿ ಅದಕ್ಕೆ ಪರಿಹಾರ ಕಂಡುಕೊಳ್ಳತಕ್ಕಂಥಾದ್ದನ್ನು ಮಾಡುತ್ತೇವೆ. ಇವತ್ತೇ ನಾನು ಕಂದಾಯ ಮಂತ್ರಿಗಳನ್ನು.....

ಶ್ರೀ ಬಿ.ಎ. ಜೀವಿಜಯ : ಸನ್ಮಾನ್ಯ ಸಚಿವರಾದ ರೇವಣ್ಣನವರು ಸಭೆಯನ್ನು ಕರೆದು ರಸ್ತೆಗಳನ್ನು ರಿಪೇರಿ ಮಾಡಿಕೊಡುತ್ತೇವೆ ಎಂದು ಹೇಳಿದರು. ನಮ್ಮ ಸಮಸ್ಯೆ ಏನೆಂದರೆ ಹಾಳಾಗಿರುವ ನಮ್ಮ ಗ್ರಾಮೀಣ ರಸ್ತೆಗಳು. ಕೊಡಗು ಕರ್ನಾಟಕಕ್ಕೆ ಸೇರಿದ ಮೇಲೆ ಎಷ್ಟು ದುರ್ವ್ಯವಸ್ಥೆ ಆಗಿದೆ ಎಂದರೆ, ಇದುವರೆಗೂ ಅಲ್ಲಿನ ರಸ್ತೆಗಳನ್ನು ರಿಪೇರಿ ಮಾಡಲಿಕ್ಕೆ ಆಗಿಲ್ಲ. ಪಿಡಬ್ಲುಡಿ ರಸ್ತೆಗಳ ಅಪ್‌ಗ್ರೆಡೇಷನ್‌ಗೆ ಕೇಳಿದರೆ, ಅದಕ್ಕೆ ಫೈನ್ಯಾನ್ಸ್

ಡಿಪಾರ್ಟ್‌ಮೆಂಟ್‌ನವರು ಏನು ಮಾಡಿದರೂ ಒಪ್ಪುವುದಿಲ್ಲ ಎಂದು ಸನ್ಮಾನ್ಯ ಸಚಿವರು ಹೇಳಿದ್ದಾರೆ, ನಾವು ಎಷ್ಟು ಬರೆದು ಕೊಟ್ಟರೂ ಅಪ್‌ಗ್ರೇಡೇಷನ್ ಆಗುವುದಿಲ್ಲ. ಪಿ ಡಬ್ಲ್ಯುಡಿ ರಸ್ತೆಯಾಗಿ ಪರಿವರ್ತನೆಯಾಗುವುದಿಲ್ಲ. ಹೀಗಾದರೆ, ಗ್ರಾಮೀಣ ರಸ್ತೆಗಳನ್ನು ನಾವು ಯಾವ ರೀತಿ ನಿರ್ವಹಣೆ ಮಾಡಬೇಕು? ಈಗ ಇಲ್ಲಿ ಆರ್ ಡಿ ಪಿ ಆರ್ ಮಿನಿಸ್ಟರ್ ಇಲ್ಲ. ಅವರು ಅದಕ್ಕೆ ಎಷ್ಟು ಹಣ ಕೊಡುತ್ತಾರೆ? ನಮ್ಮ ಜನಗಳಿಗೆ ನಾವು ಯಾವ ರೀತಿ ಉತ್ತರ ಕೊಡಬೇಕು? ಆದ್ದರಿಂದ, ಬರೀ ಕೊಡಗು ಎಂದು ನಾನು ಹೇಳುವುದಿಲ್ಲ, ಮಲೆನಾಡು ಪ್ರದೇಶಗಳಲ್ಲಿರತಕ್ಕಂಥ ಗ್ರಾಮೀಣ ರಸ್ತೆಗಳಿಗೆ ಹೆಚ್ಚಿನ ಆದ್ಯತೆಯನ್ನು ಕೊಟ್ಟು, ಹೆಚ್ಚಿನ ಅನುದಾನವನ್ನು ಕೊಡಬೇಕೆಂದು ಹೇಳಬಯಸುತ್ತೇನೆ. ಕುಂಭದ್ರೋಣ ಮಳೆಯಾಗುತ್ತಿರುವುದರಿಂದ ದಕ್ಷಿಣ ಕನ್ನಡ ಜಿಲ್ಲೆಯನ್ನು ಇದರಲ್ಲಿ ಸೇರಿಸಿ ಹೆಚ್ಚಿನ ಅನುದಾನವನ್ನು ಕೊಡಬೇಕೆಂದು ಹೇಳುತ್ತಿದ್ದೇನೆ.

ಶ್ರೀ ಹೆಚ್.ಡಿ. ಬಸವರಾಜು : ನಾನು ಪ್ರಸ್ತಾಪ ಮಾಡುವಾಗ ಗಂಭೀರವಾದಂಥ ವಿಚಾರವನ್ನು ಹೇಳಿದೆ. 3–4 ದಿವಸಗಳಲ್ಲಿ ಸಭೆ ಕರೆಯುತ್ತೇವೆ ಎಂದು ತಾವು ಹೇಳಿದಿರಿ. ಅಲ್ಲಿ ಒಂದು ವಾರದಿಂದ ಮಳೆ ಬೀಳುತ್ತಿದೆ. ಮಳೆಯ ತೀವ್ರತೆ ಜಾಸ್ತಿಯಿರುವುದರಿಂದ ಹಾನಿ ದುಪ್ಪಟ್ಟಾಗುತ್ತಿದೆ. ರಸ್ತೆಗಳ ಸುಧಾರಣೆ ನಮಗೆ ಅತ್ಯಗತ್ಯವಾಗಿ ಬೇಕಾಗಿದೆ, ಇಲ್ಲ ಎಂದೇನೂ ಅಲ್ಲ. ಆದರೆ ಅಲ್ಲಿಯವರೆಗೂ ನಾವು ಬದುಕಿದ್ದರೆ ತಾನೇ ಆ ರಸ್ತೆಗಳ ಮೇಲೆ ಓಡಾಡಲು ಸಾಧ್ಯ. ಮಳೆಯ ತೀವ್ರತೆಯಿಂದ 2–3 ದಿವಸಗಳಿಂದ ಮನೆಯ ಹೊರಗಡೆ ಬರಲಾಗದಂಥ ಪರಿಸ್ಥಿತಿ ಅಲ್ಲಿನ ಬಡವರಿಗೆ ಆಗಿದೆ. ಆರ್ಥಿಕವಾಗಿ ದುಸ್ಥಿತಿಯಲ್ಲಿರತಕ್ಕಂಥ, ಅರಣ್ಯ ಪ್ರದೇಶದಲ್ಲಿ ವಾಸ ಮಾಡುತ್ತಿರುವಂಥ ಬಡವರು 2–3 ದಿವಸಗಳಿಂದ ಕೂಲಿ ಕೆಲಸಕ್ಕೆ ಹೋಗಲು ಸಾಧ್ಯವಾಗಿಲ್ಲ, ಅವರು ಹೊರಬರಲಿಕ್ಕೆ ಆಗುತ್ತಿಲ್ಲ. ಸಂಪೂರ್ಣವಾಗಿ ಜಲಾವೃತವಾಗಿರುವ ಅಂಥ ರಸ್ತೆಗಳಲ್ಲಿ ಸಂಚಾರ ನಿಂತುಹೋಗಿದೆ. ಕೆಲವು ರಸ್ತೆಗಳಲ್ಲಿ ಸಂಪೂರ್ಣವಾಗಿ ಯಾವುದೇ ವಾಹನ ಸಂಚಾರವಿಲ್ಲ. ಭಾರೀ ಮಳೆ ಹಾಗೂ ಗಾಳಿಯ ಹೊಡೆತದಿಂದ ಮರಗಳು ಉರುಳಿ ಬಿದ್ದಿವೆ. ಇವತ್ತು ನಮಗೆ ಮೊದಲನೆಯದಾಗಿ ಬೇಕಾಗಿರುವುದೆಂದರೆ ಪರಿಹಾರ. ಈ ಪರಿಹಾರ ಕಾರ್ಯಕ್ಕೆ ತಾವು ಏನು ಹಣ ಬಿಡುಗಡೆ ಮಾಡುತ್ತೀರಿ ಎನ್ನುವುದನ್ನು ಹೇಳಬೇಕು. ಅಲ್ಲದೇ, ಪ್ರಾಣಹಾನಿಯಾಗಿದೆ. ಇದು ಗಂಭೀರವಾದಂಥ ವಿಚಾರ. ಪ್ರಾಣ ಹಾನಿಯಾದಂಥ ಎರಡು ಕುಟುಂಬಗಳವರಿಗೆ ನಾವು ತಕ್ಷಣ ಏನು ಪರಿಹಾರವನ್ನು ಒದಗಿಸಬೇಕಾಗಿದೆ ಎನ್ನುವುದರ ಬಗ್ಗೆ ಕಾಳಜಿ ಇರಬೇಕಾಗಿದೆ. ಹಲವಾರು ಗೌರವಾನ್ವಿತ ಸದಸ್ಯರುಗಳು ಅವರ ಸಮಸ್ಯೆಗಳನ್ನು ಹೇಳಿದರು. ಅವರ ಸಮಸ್ಯೆಗಳಿಗಿಂತ ನನ್ನ ಸಮಸ್ಯೆ ವಿಭಿನ್ನವಾಗಿದೆ. ಕೊಡಗಿನಲ್ಲಿರುವ ಸಮಸ್ಯೆಯ ಜೊತೆಗೆ ಬೇರೆ ಸಮಸ್ಯೆಗಳನ್ನು ಅವಲೋಕನ ಮಾಡಿದಾಗ ಈ ಸಮಸ್ಯೆಯ ತೀವ್ರತೆ ತಮ್ಮ ಗಮನಕ್ಕೆ

ಬರುತ್ತದೆ. ಪ್ರಾಣಹಾನಿ ಯಾಗಿರುವಂಥ ಕುಟುಂಬಗಳಿಗೆ ನಾವು ಏನು ಮಾಡಬೇಕಾಗಿದೆ? ಅಲ್ಲಿ ಇವತ್ತು ಗಂಜಿ ಕೇಂದ್ರವನ್ನು ತೆರೆಯಬೇಕೇ ಎನ್ನುವುದರ ಬಗ್ಗೆ ಸಮೀಕ್ಷೆಯನ್ನು ಮಾಡಬೇಕಾಗಿದೆ. ಕಳೆದ ಮೂರು ದಿವಸಗಳಿಂದ ಮಳೆಯ ತೀವ್ರತೆ ಹೆಚ್ಚಾಗಿರುವುದರಿಂದ, ಅಲ್ಲಿನ ಬಡವರು ಯಾವ ರೀತಿ ಬದುಕನ್ನು ಸಾಗಿಸಬೇಕಾಗಿದೆ ಎನ್ನುವುದರ ಬಗ್ಗೆ ನಾವು ಹೆಚ್ಚು ಗಮನ ಹರಿಸಬೇಕಾಗಿದೆ. ಬಡವರ ಸಂಕಷ್ಟವನ್ನು ಪರಿಹಾರ ಮಾಡಬೇಕಾಗಿದೆ, ರಸ್ತೆಗಳ ಸುಧಾರಣೆಯನ್ನು ಮಾಡಬೇಕಾಗಿದೆ. ಜಲಾವೃತವಾಗಿರುವಂಥ, ನೀರು ನಿಂತಿರುವಂಥ ರಸ್ತೆಗಳನ್ನು ಒಮ್ಮೆಲೇ ಸುಧಾರಣೆ ಮಾಡುವುದಕ್ಕಾಗುವುದಿಲ್ಲ. ಅದಕ್ಕೆ ಸ್ವಲ್ಪ ಸಮಯ ಬೇಕಾಗುತ್ತದೆ. ಅದಕ್ಕೆ ಹೆಚ್ಚಿನ ಪರಿಹಾರವನ್ನು ಕೊಡಿ. ಆದರೆ ಮನುಷ್ಯನನ್ನು ಕಾಪಾಡುವಂಥ ಕೆಲಸವನ್ನು ನಾವು ತಕ್ಷಣ ಮಾಡಬೇಕಾಗಿದೆ. ಪ್ರಾಣ ಹಾನಿಯಾದಂಥ ಕುಟುಂಬಗಳಿಗೆ ತಕ್ಷಣ ಪರಿಹಾರವನ್ನು ಒದಗಿಸುವಂಥಾದ್ದನ್ನು ಇಲ್ಲಿ ಘೋಷಣೆ ಮಾಡಬೇಕು ಎಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದಂಥ ಬಸವರಾಜುರವರು ಪ್ರಸ್ತಾಪ ಮಾಡಿರುವಂಥ ವಿಷಯ ಬಹಳ ಗಂಭೀರವಾಗಿದೆ. ಕಳೆದ 2–3 ದಿವಸಗಳಿಂದ ಕೊಡಗು ಜಿಲ್ಲೆಯಲ್ಲಿ ಮಳೆ ಸತತವಾಗಿ ಬೀಳುತ್ತಿದೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ.....

ಶ್ರೀ ಹೆಚ್.ಡಿ. ಬಸವರಾಜು : ಕೊಡಗು ಜಿಲ್ಲೆಯ ಬಗ್ಗೆ ನಾನು ಏಕೆ ಪ್ರತ್ಯೇಕವಾಗಿ ಹೇಳುತ್ತಿದ್ದೇನೆ ಎಂದರೆ ಅಲ್ಲಿ ಹಾನಿ ಬಹಳವಾಗಿದೆ. ಎರಡು ಕುಟುಂಬಗಳು ನಿರ್ನಾಮವಾಗಿವೆ. ಆರು ಸಾವಾಗಿದೆ. ಈ ರೀತಿ ನಿಮ್ಮ ಜಿಲ್ಲೆಗಳಲ್ಲಿ ಆಗಿದ್ದರೆ, ನೀವೂ ಕೂಡ ಅದರ ಗಂಭೀರತೆಯನ್ನು ಸದನಕ್ಕೆ ತೆಗೆದುಕೊಂಡು ಬಂದು ಹೇಳಿ, ನಾನು ಬೇಡಿ ಎನ್ನುವುದಿಲ್ಲ. ದಕ್ಷಿಣಕನ್ನಡ ಜಿಲ್ಲೆಗೂ ನಮ್ಮ ಜಿಲ್ಲೆಗೂ ವ್ಯತ್ಯಾಸವಿದೆ ಎಂದು ನಾನು ಹೇಳುತ್ತಿದ್ದೇನೆ.

ಅಧ್ಯಕ್ಷರು : ಇಡೀ ಮಲೆನಾಡಿನ ಜಿಲ್ಲೆಗಳ ಅಂದರೆ ದಕ್ಷಿಣ ಕನ್ನಡ, ಉಡುಪಿ, ಕಾರವಾರ, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ ಹೀಗೆ ಮಲೆನಾಡಿನ ಎಲ್ಲಾ ಜಿಲ್ಲೆಗಳ ಸದಸ್ಯರು ಮಳೆಯ ಪ್ರವಾಹದಿಂದ ಆಗಿರತಕ್ಕಂಥ ಅನಾಹುತದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನೀವು ಅದಕ್ಕೆ ಉತ್ತರ ಹೇಳಿ.

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) : ಕೊಡಗಿನಲ್ಲಿ ಸತತವಾಗಿ ಮಳೆ ಬೀಳುತ್ತಿದೆ. ಅದೇ ರೀತಿ ದಕ್ಷಿಣ ಕನ್ನಡ ಜಿಲ್ಲೆ, ಬೆಳಗಾವಿ ಜಿಲ್ಲೆಗಳಿಂದಲೂ ಮಳೆಯಾಗುತ್ತಿರುವ ಬಗ್ಗೆ ವರದಿಗಳು ಬರುತ್ತಿವೆ. ಹಾಗಾಗಿ, ಈ ಮಳೆಯಿಂದ ಆಗುತ್ತಿರುವ ಅನಾಹುತಗಳನ್ನು ತಡೆಹಿಡಿಯಲು ಏನು ಪ್ರಯತ್ನವನ್ನು ಮಾಡಬೇಕೋ, ಸರ್ಕಾರದಿಂದ ಆ ಪ್ರಯತ್ನಗಳು ಆಗುತ್ತಿವೆ. ತಕ್ಷಣವೇ ಏನೇನು ಪರಿಹಾರ ಕ್ರಮವನ್ನು ಕೈಗೊಳ್ಳಬೇಕು

ಎನ್ನುವುದರ ಬಗ್ಗೆಯೂ ಸರ್ಕಾರ ಕ್ರಮ ಕೈಗೊಳ್ಳುತ್ತಿದೆ. ಪ್ರಮುಖವಾಗಿ ಕೊಡಗು ಜಿಲ್ಲೆಯಲ್ಲಿ ಪ್ರಾಣಹಾನಿಯಾಗಿರುವ ವರದಿ ಬಂದಿದೆ. ಮಾನ್ಯ ರಾಮಚಂದ್ರ ಗೌಡರು ಆ ಜಿಲ್ಲೆಯ ಉಸ್ತುವಾರಿ ಸಚಿವರಾಗಿದ್ದು, ಈಗಾಗಲೇ ಬೆಳಿಗ್ಗೆ ಕೊಡಗು ಜಿಲ್ಲೆಗೆ ಹೋಗಿದ್ದು, ಎಲ್ಲೆಲ್ಲಿ ತೊಂದರೆಯಾಗಿದೆ, ಎಲ್ಲೆಲ್ಲಿ ಅನಾಹುತವಾಗಿದೆ ಅಲ್ಲಿಗೆ ಭೇಟಿ ಕೊಡುತ್ತಿದ್ದಾರೆ ಮತ್ತು ಅಲ್ಲಿ ಜೀವಹಾನಿಯಾದ ಕುಟುಂಬಗಳಿಗೆ ತಕ್ಷಣವೇ ಪರಿಹಾರಧನವನ್ನು ಕೊಡುವ ವ್ಯವಸ್ಥೆಯನ್ನು ಸರ್ಕಾರ ಮಾಡುತ್ತದೆ. ಈ ದಿನವೇ ಆ ಪರಿಹಾರಧನವನ್ನು ಕೊಡುವ ವ್ಯವಸ್ಥೆಯನ್ನು ಸರ್ಕಾರ ಮಾಡುತ್ತದೆನ್ನುವ ಸ್ಪಷ್ಟವಾದ ಭರವಸೆಯನ್ನು ನಾನಿಲ್ಲಿ ನೀಡುತ್ತಿದ್ದೇನೆ. ಅದರ ಜೊತೆಗೆ ಎಲ್ಲಿ ಮನೆಗಳ ಲುಕ್ಸಾನು ಆಗಿವೆ, ಆಸ್ತಿಪಾಸ್ತಿಗೆ ತೊಂದರೆಯಾಗಿದೆ, ಅವುಗಳಿಗೆ ಸಹ ಪರಿಹಾರ ಕೊಡುವ ಕೆಲಸವನ್ನು ಸರ್ಕಾರ ಮಾಡುತ್ತದೆ ಮತ್ತು ಬೇರೆ ಬೇರೆ ಪರಿಹಾರ ಕಾರ್ಯವನ್ನು ತಕ್ಷಣವೇ ಕೈಗೊಳ್ಳುವ ಕೆಲಸವನ್ನು ನಾವು ಮಾಡುತ್ತೇವೆ. ಇದು ಕೊಡಗು ಜಿಲ್ಲೆಗೆ ಸಂಬಂಧಪಟ್ಟದ್ದು. ಇನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೂಡ ಈ ರೀತಿಯಾದ ತೊಂದರೆಯಾಗಿರುವುದು ನಮ್ಮ ಗಮನಕ್ಕೆ ಬಂದಿದೆ. ಅಲ್ಲಿಯೂ ಕೂಡ ಇದೇ ರೀತಿಯ ಪರಿಹಾರ ಕಾರ್ಯಗಳನ್ನು ನಾವು ತೆಗೆದುಕೊಂಡಿದ್ದೇವೆ.

ಶ್ರೀ ಹೆಚ್.ಎಂ. ವಿಶ್ವನಾಥ್ : ಆಲೂರು, ಸಕಲೇಶಪುರ, ಅರಕಲಗೂಡು, ಬೇಲೂರು, ಹೇಮಾವತಿ ಪಕ್ಕದಲ್ಲಿರುವ ...

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಇಡೀ ರಾಜ್ಯದಿಂದ ಈ ರೀತಿಯ ವರದಿ ಬೆಳಗ್ಗಿನಿಂದ ಬರುತ್ತಿದೆ. ಎಲ್ಲೆಲ್ಲಿ ಈ ರೀತಿಯಾದ ತೊಂದರೆಯಾಗಿವೆ, ಮಳೆಯಿಂದ ಅನಾಹುತವಾಗಿದೆ, ಅದಕ್ಕೆ ಎಲ್ಲಾ ರೀತಿಯ ಪರಿಹಾರ ಕಾರ್ಯವನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರ ತಕ್ಷಣವೇ ಯುದ್ಧೋಪಾದಿಯಲ್ಲಿ ಇವತ್ತು ಕೆಲಸಕ್ಕೆ ನಿಂತಿದೆ ಎನ್ನುವ ಮಾತನ್ನು ಸ್ಪಷ್ಟವಾಗಿ ಹೇಳುತ್ತಿದ್ದೇನೆ.

ಶ್ರೀ ಹೆಚ್.ಡಿ. ಬಸವರಾಜು : ಪರಿಹಾರದ ಮೊತ್ತ ಎಷ್ಟೊಂಬುದನ್ನು ಘೋಷಣೆ ಮಾಡಿ ಸ್ವಾಮಿ. ಈಗ ಪ್ರಾಣಹಾನಿಯಿಂದ ಎರಡು ಕುಟುಂಬ ನಲುಗಿ ಹೋಗಿದೆ. ಪರಿಹಾರದ ಮೊತ್ತವನ್ನು ಘೋಷಣೆ ಮಾಡಿ. ಏಕೆಂದರೆ, ಪರಿಹಾರದ ಮೊತ್ತವನ್ನು ಇವತ್ತು ನಿರೀಕ್ಷೆ ಮಾಡುತ್ತಿರುವುದು. ಪರಿಹಾರ ಕೊಡುತ್ತೇವೆಂದು ಹೇಳಿದರೆ ಅದು ಎಷ್ಟೆಂಬುದು ಬೇಕು.

ಶ್ರೀ ಜಗದೀಶ್ ಶೆಟ್ಟರ್ : ಕೊಡಗು ಜಿಲ್ಲೆಯಲ್ಲಿ 6 ಜನರು ಈ ಅನಾಹುತದಿಂದ ಪ್ರಾಣಹಾನಿಗೆ ಒಳಪಟ್ಟಿದ್ದಾರೆ. ಆ ಕುಟುಂಬದವರಿಗೆ ಪರಿಹಾರಧನವನ್ನು ಮಾನ್ಯ ರಾಮಚಂದ್ರಗೌಡರು ಅಲ್ಲಿಗೆ ಏನು ಹೋಗಿದ್ದಾರೆ, ಅವರ ಮುಖಾಂತರ ಆ ಪರಿಹಾರ ಕೊಡುವ ವ್ಯವಸ್ಥೆಯನ್ನು ಇವತ್ತೇ ಮಾಡುತ್ತೇವೆ.

ಶ್ರೀ ಹೆಚ್.ಡಿ. ಬಸವರಾಜು : ತಾವು ಹೇಳುತ್ತಿದ್ದೀರಿ. ಅದನ್ನು ನಾನು ಒಪ್ಪಿಕೊಂಡಿದ್ದೇನೆ ಮತ್ತು ಸ್ವಾಗತ ಮಾಡುತ್ತೇನೆ. ನೀವು ತತ್ಕ್ಷಣ ಕಾರ್ಯಪ್ರವೃತ್ತರಾಗಿರುವುದಕ್ಕೆ ನಾನು ಅಭಿನಂದಿಸುತ್ತೇನೆ. ಆದರೆ ತಾವು ಮೊತ್ತ ಎಷ್ಟು ಎಂಬುದನ್ನು ಹೇಳುತ್ತಿಲ್ಲ. ಅದನ್ನು ಸ್ಪಷ್ಟೀಕರಣ ಮಾಡಬೇಕು. ಏಕೆಂದರೆ, ಒಂದು ಪ್ರಾಣಹಾನಿಯಾಯಿತೆಂದರೆ ಒಂದು ಲಕ್ಷ ರೂಪಾಯಿ ಕೊಡುತ್ತೀರಾ ಅಥವಾ ಎರಡು ಲಕ್ಷ ರೂಪಾಯಿಗಳನ್ನು ಕೊಡುತ್ತೀರಾ ಎನ್ನುವುದು ಬೇಕು.

ಶ್ರೀ ಜಗದೀಶ್ ಶೆಟ್ಟರ್ : ಒಂದೊಂದು ಕುಟುಂಬದವರಿಗೆ 50 ಸಾವಿರ ರೂಪಾಯಿಗಳ ಧನಸಹಾಯವನ್ನು ತಕ್ಷಣವೇ ಕೊಡುತ್ತೇವೆ. ಇವತ್ತೇ ನಾವು cheque ಕೊಟ್ಟುಬಿಡುತ್ತೇವೆ.

ಶ್ರೀ ಕೆ. ಅಭಯಚಂದ್ರ : ಮಾನ್ಯ ಅಧ್ಯಕ್ಷರೆ, ವಿಶೇಷವಾಗಿ ಮಳೆ ಹಾನಿಯಿಂದ ಕುಸಿದಂಥ ಮನೆಗಳ ಕೋಣೆಗೆ ಕೆಲವು ಸಲ 500 ರೂಪಾಯಿ, 1000 ರೂಪಾಯಿ, 2000 ರೂಪಾಯಿಗಳವರೆಗೆ ಮಾತ್ರ ಕೊಡುತ್ತಾರೆ. ಅದಕ್ಕೆ ಕನಿಷ್ಟ ಹತ್ತು ಸಾವಿರ ರೂಪಾಯಿಗಳನ್ನು ಕೊಡುವ ಕೆಲಸ ಸರ್ಕಾರ ಮಾಡಬೇಕಾಗಿದೆ. ಏಕೆಂದರೆ, ಮಳೆಯಿಂದಾಗಿ ಇಡೀ ಮನೆ ನೀರಿನಿಂದ ಆವೃತ್ತವಾಗಿರುತ್ತದೆ. ಆ ಮನೆಯನ್ನು rebuilt ಮಾಡಬೇಕಾಗುತ್ತದೆ. ಆದ್ದರಿಂದ ಕನಿಷ್ಟ ಹತ್ತು ಸಾವಿರ ರೂಪಾಯಿಗಳನ್ನು ಕೊಡವ ಕೆಲಸ ಸರ್ಕಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎ. ಜೀವಿಜಯ : ಮಾನ್ಯ ಅಧ್ಯಕ್ಷರೆ, ಸರ್ಕಾರ ನಮಗೆ ದುಡ್ಡು ಕೊಡುವುದು ಬೇಡ. ಯಾವ ಮನೆ ಬಿದ್ದುಹೋಗಿದೆ, ಆ ಮನೆಯನ್ನು ನಮಗೆ ಕಟ್ಟಿಸಿ ಕೊಟ್ಟುಬಿಡಿ.

ಶ್ರೀ ಕೆ. ಅಭಯಚಂದ್ರ : ಮೊನ್ನೆ ನಮಗೆ ಪರಿಹಾರ ಕೊಡುತ್ತೇವೆಂದು ಹೇಳಿ 2000 ರೂಪಾಯಿ, ಒಂದು ಸಾವಿರ ರೂಪಾಯಿ ಕೊಟ್ಟರೆ ಅದು ಯಾವುದಕ್ಕೆ ಸಾಕಾಗುತ್ತದೆ?

(ಅಡಚಣೆ)

ಶ್ರೀ ಬಿ.ಎ. ಜೀವಿಜಯ : ಸನ್ಮಾನ್ಯ ಎಂ.ಪಿ. ಪ್ರಕಾಶ್‌ರವರಿಗೆ ಗೊತ್ತಿದೆ. ಕಳೆದ ವರ್ಷ ಒಂದು ಬೆಟ್ಟವೇ ಕುಸಿದುಹೋಯಿತು. ವರದಿಯನ್ನು ಸರ್ಕಾರಕ್ಕೆ ಕಳುಹಿಸಿಕೊಟ್ಟೆವು. ಆದರೆ ಸರ್ಕಾರದಿಂದ ನೀವು ಏನು ಕೊಟ್ಟಿದ್ದೀರಿ? ಸದನದಲ್ಲಿ ಸುಮ್ಮನೆ ಏನೋ ಭರವಸೆ ಕೊಡುತ್ತೀರಿ ಹೊರತು ಪರಿಹಾರ ಬೇಕಾದ ಕಡೆಗೆ ಏನೂ ಸಹಾಯ ಮಾಡುವುದಿಲ್ಲ.

ಶ್ರೀ ಕೆ. ಅಭಯಚಂದ್ರ : ಸಚಿವರಿಗೆ ಹೇಳಲಿಕ್ಕೆ ಹೋಗಿಯೇ ಆ ಎರಡು ಸಾವಿರ ರೂಪಾಯಿಗಳು ಖರ್ಚಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ : ಪರಿಹಾರ ಕೊಡುವ ವ್ಯವಸ್ಥೆ ಏನಿದೆ, ಇದಕ್ಕೆ CRF ನಿಂದ ಕೇಂದ್ರ ಸರ್ಕಾರ ಕೊಡುತ್ತಿದೆ. ಅವರೇನು ಕೆಲವೊಂದು guidelines, ನಿಯಮಾವಳಿಗಳನ್ನಿಟ್ಟಿದ್ದಾರೆ, ಅದರ ಪ್ರಕಾರ ಈ ಪರಿಹಾರಧನವನ್ನು ಕೊಡುವ ವ್ಯವಸ್ಥೆ ಇದೆ. ಇದರಲ್ಲಿ ಇನ್ನೂ ಹೆಚ್ಚಿಗೆ ಪರಿಹಾರ ಕೊಡುವುದಕ್ಕೆ ಅವಕಾಶವನ್ನು ಕೊಡಬೇಕೆಂದು ನಾವು ಈಗಾಗಲೇ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದೇವೆ. ಅದರ ಪ್ರಕಾರ ಇನ್ನೂ ಹೆಚ್ಚಿನ ಪರಿಹಾರ ಕೊಡುವ ವ್ಯವಸ್ಥೆ ಮಾಡಲಿಕ್ಕೆ ನಾವು ಕ್ರಮವನ್ನು ಕೈಗೊಳ್ಳುತ್ತೇವೆ. ಇವತ್ತು ಎಲ್ಲಿ ಸಣ್ಣಮಟ್ಟ ತೊಂದರೆಯಾಗಿವೆ, ತಕ್ಷಣವೇ ತಹಶೀಲ್ದಾರ್‌ರವರೇ 800 ರೂಪಾಯಿಗಳವರೆಗೆ ಕೊಡುವ ವ್ಯವಸ್ಥೆ ಇದೆ ಮತ್ತು ಮನೆಗಳು ಬಿದ್ದಲ್ಲಿ ಆರು ಸಾವಿರ ರೂಪಾಯಿಗಳನ್ನು ಕೊಡುವ ವ್ಯವಸ್ಥೆ ಇದೆ. ಹಾಗೂ ಬಹಳಷ್ಟು ತೊಂದರೆ ಇದ್ದಂಥ ಸಂದರ್ಭದಲ್ಲಿ ಆಶ್ರಯ ಮನೆಗಳ ಮುಖಾಂತರ, ಬೇರೆ ಬೇರೆ ಮನೆಗಳ ಮುಖಾಂತರ ಅವರಿಗೆ ಹೊಸದಾಗಿ ಮನೆ ಕಟ್ಟಿಕೊಡುವುದಕ್ಕೆ ಸರ್ಕಾರದ ಕಡೆಯಿಂದ ನಾವು ನಿರ್ಧಾರ ಮಾಡುತ್ತೇವೆ.

ಶ್ರೀ ಕೆ. ಅಭಯಚಂದ್ರ : ಆಶ್ರಯ ಮನೆ ಎಲ್ಲಿ ಕೊಡುತ್ತಾರೆ? ಆಶ್ರಯ ಮನೆ ಕೊಡಿಸಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, Rehabilitation ಮುಖಾಂತರ ಕೊಡಬಹುದು. ಅದರಲ್ಲಿ ಹೆಚ್ಚಿನ ಪರಿಹಾರ ಸಾಧ್ಯವಿದೆ.

ಶ್ರೀ ಕೆ. ಅಭಯಚಂದ್ರ : ಮಾನ್ಯ ಅಧ್ಯಕ್ಷರೆ, ತಾವು ನಮ್ಮ ರಕ್ಷಣೆಗೆ ಬರಬೇಕು. ಓಬಿರಾಯನ ಕಾಲದ ಲೆಕ್ಕ ಇಟ್ಟುಕೊಂಡಿದ್ದಾರೆ. 800 ರೂಪಾಯಿಗಳನ್ನು ಕೊಡುತ್ತೇನೆಂದು ಹೇಳುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು : ಅವರು ವಿವರವಾಗಿ ಉತ್ತರ ಕೊಟ್ಟಿದ್ದಾರೆ. ನೀವು ನಿರೀಕ್ಷೆ ಮಾಡಿದ ರೀತಿ ಸರ್ಕಾರದವರು ಉತ್ತರ ಕೊಡುವುದಕ್ಕಾಗುವುದಿಲ್ಲ. ಸಮಗ್ರವಾಗಿ ಅಧ್ಯಯನ ಮಾಡುವುದಕ್ಕೆ ಆಯಾಯ ಜಿಲ್ಲಾ ಮಂತ್ರಿಗಳನ್ನು ಅಲ್ಲಿಗೆ ಕಳುಹಿಸಿದ್ದೇವೆ., ಪರಿಹರ ವ್ಯವಸ್ಥೆಯನ್ನು ಮಾಡುತ್ತೇವೆಂದು ಹೇಳಿದ್ದಾರೆ. ಇನ್ನೇನು ಬೇಕು?

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜು : ಮಾನ್ಯ ಅಧ್ಯಕ್ಷರಲ್ಲಿ ನಾನೊಂದು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು : ಮಾನ್ಯ ಬಸವರಾಜುರವರೇ, ಬೆಳಿಗ್ಗೆಯಿಂದಲೇ ನೀವು ವಿನಂತಿ ಮಾಡಿಕೊಳ್ಳುತ್ತಲೇ ಇದ್ದೀರಿ. ಅದಕ್ಕೆ ಸಮಗ್ರವಾಗಿ ಉತ್ತರ ಕೊಟ್ಟಿದ್ದಾರೆ. ಅದಕ್ಕೆ ಪರಿಹಾರ ರೂಪದಲ್ಲಿ 50 ಸಾವಿರ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ಇನ್ನೇನು ಸರ್ಕಾರದವರು ಹೇಳುವುದಕ್ಕಾಗುತ್ತದೆ?

ಶ್ರೀ ಹೆಚ್.ಡಿ. ಬಸವರಾಜು : ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿದೆ. ಕಳ್ಳಬಟ್ಟಿ ದುರಂತದಲ್ಲಿ ಸತ್ತವರಿಗೆ ಒಂದು ಲಕ್ಷ ರೂಪಾಯಿಗಳನ್ನು ಕೊಡುತ್ತಾರೆ ಸರ್.

ಅಧ್ಯಕ್ಷರು : ಬಸವರಾಜುರವರೇ, ಹೀಗೆ ಮಾಡಿ ಹಾಗೆ ಮಾಡಿ ಎಂದು ನೀವು ಸರ್ಕಾರಕ್ಕೆ ನಿರ್ದೇಶನ ಕೊಡುವುದಕ್ಕಾಗುವುದಿಲ್ಲ.

ಶ್ರೀ ಹೆಚ್.ಡಿ. ಬಸವರಾಜು : ವಿನಂತಿ ಮಾಡಿಕೊಂಡರೆ ವಿನಂತಿ ಮಾಡಿಕೊಳ್ಳುತ್ತೀರಿ ಎಂದು ಹೇಳುತ್ತೀರಿ. ನಾನು ನಿರ್ದೇಶನ ಕೊಡುತ್ತಿಲ್ಲ. ವಿನಂತಿ ಮಾಡುತ್ತಿದ್ದೇನೆ.

ಅಧ್ಯಕ್ಷರು : ದಯಮಾಡಿ ಕೇಳಿ. ಅವರು ಏನು ಬೇಕೋ ಉತ್ತರ ಕೊಟ್ಟಿದ್ದಾರೆ. ಹೀಗೇ ಹೇಳಿ ಎಂದು ನಾನು ಉತ್ತರ ಕೊಡಿಸುವುದಕ್ಕಾಗುತ್ತದೆಯೇ? ನೀವೇನು ಹೇಳುತ್ತಿದ್ದೀರಿ? ಅಲ್ಲಿ ಆಗಿರುವ ಅನಾಹುತದ ಬಗ್ಗೆ ಸವಿವರವಾಗಿ ಹೇಳಿದ್ದೀರಿ. ಅದಕ್ಕೆ ಅವರು ಉತ್ತರ ಕೊಟ್ಟಿದ್ದಾರೆ. ನೀವು ಅವರ ಹತ್ತಿರ ಹೋಗಿ ಸಮಾಧಾನದಿಂದ ಅವರ ಹತ್ತಿರ ಮಾತನಾಡಬೇಕು. ಇಲ್ಲಿಯೇ ಎಲ್ಲವೂ ಚರ್ಚೆಯಾಗಬೇಕೆಂದರೆ ಹೇಗೆ?

ಶ್ರೀ ಹೆಚ್. ಆಂಜನೇಯ : ಮಾನ್ಯ ಅಧ್ಯಕ್ಷರೆ, ಇವತ್ತೇನು ಮಾನ್ಯ ಬಸವರಾಜುರವರು ತಮ್ಮ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ, ಒಂದು ಕುಟುಂಬ ನೀರುಪಾಲಾಗಿ ಸತ್ತುಹೋಗಿದ್ದಾರೆ, ಅಧಿಕ ಮಳೆಯಿಂದಾಗಿ ಊರೆಲ್ಲ ಜಲಾವೃತ್ತವಾಗಿದೆ ಎಂದು ಹೇಳಿದ್ದಾರೆ. ಜಿಲ್ಲಾಧಿಕಾರಿಯವರನ್ನು, ಸಂಬಂಧಪಟ್ಟ ಕಂದಾಯ ಅಧಿಕಾರಿಗಳನ್ನು ಕಛೇರಿಗೆ ಕರೆಸಿ ಇದರ ಬಗ್ಗೆ ತುರ್ತಾಗಿ ಕ್ರಮ ತೆಗೆದುಕೊಳ್ಳಬೇಕು. ಇದರ ಬಗ್ಗೆ ಇಲ್ಲಿ ಬರೀ ಹೇಳುವುದಲ್ಲ. ತಕ್ಷಣ ಇವತ್ತೇ ಅವರನ್ನು ಸಚಿವರ ಕಛೇರಿಗೆ ಕರೆಸಿ ಇವತ್ತೇ ಮೀಟಿಂಗ್ ಮಾಡಿ ಅವರಿಗೆ ಏನೇನು ಬೇಕೆಂದು ನೋಡಿ ಇವತ್ತೇ ಪರಿಹಾರ ಕೊಡುವ ವ್ಯವಸ್ಥೆ ಮಾಡಲಿ.

ಶ್ರೀ ಜಗದೀಶ್ ಶೆಟ್ಟರ್ : ಇಲ್ಲಿ ಘೋಷಣೆ ಮಾಡಿದರೂ ಕೂಡ ನಂಬಿಕೆ ಇಲ್ಲ ಎಂದರೆ ಹೇಗೆ?

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಬಸವರಾಜುರವರು ನಿಮ್ಮ ಪಕ್ಷದವರೇ ಆಗಿದ್ದು ನಿಮ್ಮ ಪಕ್ಷದವರಿಗೇ ಸಚಿವರು ಹೇಳುವ ಮಾತಿನ ಮೇಲೆ ನಂಬಿಕೆ ಇಲ್ಲ. ನಿಮ್ಮ ಸಚಿವರ ಬಗ್ಗೆಯೇ ವಿಶ್ವಾಸವಿಲ್ಲವೆಂದರೆ ಹೇಗೆ?

(ಗೊಂದಲ)

ಶ್ರೀ ಹೆಚ್. ಆಂಜನೇಯ : ವಿಶ್ವಾಸದ ಪ್ರಶ್ನೆ ಅಲ್ಲ. ಮಾನ್ಯ ರಾಯರೆಡ್ಡಿಯವರೇ, ವಿಶ್ವಾಸದ ಪ್ರಶ್ನೆ ಅಲ್ಲ. ವಿಶ್ವಾಸ ಇದೆ. ವಿಶ್ವಾಸ ಇಲ್ಲವೆಂದಲ್ಲ. ಅವರ ಕಳಕಳಿ, ದುಃಖ, ಅವರ ಊರು ಜಲಾವೃತ್ತವಾಗಿದೆ. ಜನ ಸತ್ತುಹೋಗಿದ್ದಾರೆ. ಅವರು ಅಲ್ಲಿಯ ಶಾಸಕರಾಗಿರುವುದರಿಂದ ಒಂದು ಪ್ರತಿಭಟನೆ ಮತ್ತು ಅಲ್ಲಿಯ ಜನರ ಅನುಕಂಪದ ಮೇಲೆ ಅವರು ಆ ರೀತಿ ಮಾಡಿದ್ದಾರೆ.

(ಗೊಂದಲ)

ಅಧ್ಯಕ್ಷರು : ಉತ್ತರ ಕೊಟ್ಟಿದ್ದಾರೆ ಬಿಡಿ. ಇನ್ಯಾಕೆ ಮುಂದುವರಿಸುತ್ತೀರಿ? ಈಗ ಮಾನ್ಯ ಮಾಧುಸ್ವಾಮಿಯವರು ಯಾವ ವಿಚಾರದ ಬಗ್ಗೆ ಕೇಳಬೇಕೆಂದಿದ್ದೀರೋ ಕೇಳಿ.

(ಆ) ವಿಷಯ : ಕರ್ನಾಟಕ ಲೋಕ ಸೇವಾ ಆಯೋಗದಿಂದ ಮೊದಲನೆ ದರ್ಜೆ ಸಹಾಯಕರ ಹುದ್ದೆ ಭರ್ತಿ ಬಗ್ಗೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಕರ್ನಾಟಕ Public Service Commission ಆದಾಗ ಒಂದಷ್ಟು ಜನರಿಗೆ First Division Clerk ಕೆಲಸ ಕೊಡಲಿಕ್ಕೆ notification ಆಗಿ appointment ಮಾಡಿದರು. PSC ನಲ್ಲಿ appointment ಮಾಡಿದ್ದಾರೆ. ಆದರೆ ರಾಜ್ಯದಲ್ಲಿ ಇನ್ನೂ ಕೂಡ ಸುಮಾರು vacancies ಹಾಗೆಯೇ ಉಳಿದಿದೆ ಎಂದು Public Service Commission ಒಪ್ಪಿಕೊಳ್ಳುತ್ತಿದೆ. ಈ FDA ಹುಡುಗರು ಏನಿದ್ದಾರೆ, ಈಗಿರುವ merit list ನಲ್ಲಿಯೇ ಉಳಿದಿರುವ vacancy ಅನ್ನು fill up ಮಾಡಿದರೆ ತಾವು ಮತ್ತೊಂದು ಸಲ ಸಂದರ್ಶನ ಕರೆಯುವುದು ಅಥವಾ ಆ ಹುಡುಗರಿಗೆ ಪರೀಕ್ಷೆ ಬರೆಯಿರಿ ಎಂದು ಹೇಳುವುದು, 250–300 posts ಗೆ ಲಕ್ಷಾಂತರ ಹುಡುಗರು ಬರಯುವುದು ತಪ್ಪುತ್ತದೆ. ಹಾಲಿ vacancy ಏನಿದೆ, ಅದನ್ನೂ ಕೂಡ fill up ಮಾಡಲಿಕ್ಕೆ existing merit list ನಲ್ಲಿ Public Service Commission ಗೆ ಒಂದು direction ಕೊಡುತ್ತೀರಾ ಎಂದು ಕೇಳಬಯಸುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಬಹಳ ಉತ್ತಮವಾದಂಥ ಸಲಹೆಯನ್ನು ಮಾನ್ಯ ಸದಸ್ಯರು ಕೊಟ್ಟಿದ್ದಾರೆ. ನಿರುದ್ಯೋಗದ ಸಮಸ್ಯೆ ಬೇಕಾದಷ್ಟು ಇದ್ದಾಗ ಮತ್ತು ಹಣಕಾಸಿನ ಇಲಾಖೆ ಒಪ್ಪಿಗೆ ಕೊಟ್ಟಿರತಕ್ಕಂಥ ಈ ಪ್ರಥಮ ದರ್ಜೆ ಸಹಾಯಕರು ಮತ್ತು ದ್ವಿತೀಯ ದರ್ಜೆ ಸಹಾಯಕರುಗಳಿಗೆ ನಾವು ಮತ್ತೆ ಮೊದಲು ಕೊಟ್ಟಿರುವ ಮಿತಿ ಮೀರಿದೆ ಎನ್ನುವ